# ಮಾನಸಿ

ಆಗಸ್ಟ್ 2005 ತಿಂಗಳ ಪತ್ರಿಕೆ

- ಬದಲಾಗುತ್ತಿರುವ ಸಂದರ್ಭದಲ್ಲಿ ಮಹಿಳಾ ಚಳುವಳಿಯ ಮುಂದಿರುವ ಸವಾಲುಗಳು
- ಸ್ವಾತಂತ್ರ್ಯ ಮತ್ತು ಕರ್ನಾಟಕದ ಮಹಿಳೆ ಬಲಿದಾನದ ಫಲಶ್ರುತಿ ಇದೇ ಏನು?
- 'ಪದ್ಯ ಬರೆಯುವುದರ ಪ್ರತಿಫಲ ಅಪಾಯವಾದರೆ ಅದರೊಂದಿಗೇ ಬದುಕಬೇಕಾಗುತ್ತದೆ'
- ಹೀಗೇಕೆ?

**ಮಾನಸ** ತಿಂಗಳ ಪತ್ರಿಕೆ ಆಗಸ್ಟ್ 2005
ಸಂಪುಟ : 20 ಸಂಚಿಕೆ : 8



**ವಿಳಾಸ :**
**"ಮಾನಸ"** ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

**ಸೂಚನೆ :** ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

## ಈ ಸಂಚಿಕೆಯಲ್ಲಿ....



**ಮೈಸೂರು**

ಮೈಸೂರಿನಲ್ಲಿ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
**ವೆಂ.ವನಜ :** 2329, 12ನೇ ಮೇನ್, 2ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ-ಅಂಚೆ, ಬೆಂಗಳೂರು - 560 067

# ಸಂಪಾದಕೀಯ



ಇಮ್ರಾನ ನಂತಹ ಮಹಿಳೆಯರು ಮೂಲಭೂತವಾದಿಗಳ ವಿಚಾರಗಳಿಗೆ ಬೆಲೆ ತೆರುವಂತಹ ಸಂದರ್ಭ ಇದೇ ಮೊದಲಲ್ಲ. 1985ರಲ್ಲಿ ಶಾಭಾನು ಪ್ರಕರಣದಲ್ಲಿ ಕೂಡಾ ಮೂಲಭೂತವಾದಿಗಳು ಹೀಗೆಯೇ ವಿವಾದಗಳನ್ನು ಹುಟ್ಟು ಹಾಕಿದ್ದು, ಮುಸ್ಲಿಂ ವಿಮೆನ್ಸ್ ಬಿಲ್' ಜಾರಿಗೆ ಬಂದದ್ದನ್ನ ನಾವು ಜ್ಞಾಪಿಸಿಕೊಳ್ಳಬಹುದಾಗಿದೆ.

ಇಂತಹ ಸಂದರ್ಭಗಳಿಗೆ ಎಲ್ಲಾ ಧರ್ಮದ ಮೂಲಭೂತವಾದಿಗಳೂ ಅವಕಾಶವಾದಿಗಳಾಗಿ ಕಾಯುತ್ತಲೇ ಇರುತ್ತಾರೆ. ಶಾಭಾನು, ಇಮ್ರಾನರಂತಹ ಪ್ರಕರಣಗಳು 'ರಾಜಕೀಯ ದಾಳ' ಗಳಾಗಿ ಪರಿವರ್ತನೆಯಾಗಿ ಓಟು ಬ್ಯಾಂಕಿನ ಹಿನ್ನಲೆಯಲ್ಲಿ ಕೆಲಸ ಮಾಡ ತೊಡಗುತ್ತವೆ. ಹಾಗಾಗಿ ಉತ್ತರ ಪ್ರದೇಶದ ಮುಲಾಯಮ್ ಸಿಂಗ್ ಯಾದವ್ - ಮುಜಾಫರ್ ನಗರದ ಮೌಲ್ವಿಗಳು ಮಾವನಿಂದ ಅತ್ಯಾಚಾರಕ್ಕೊಳಗಾದ ಮಹಿಳೆಯ ವಿವಾಹ ಧಾರ್ಮಿಕವಾಗಿ ಅನೂರ್ಜಿತಗೊಳುತ್ತಿದೆ ಎಂದು ಹೇಳಿದುದನ್ನು ಪ್ರಶ್ನೆ ಮಾಡಲಾಗುವುದಿಲ್ಲ ಎನ್ನುತ್ತಾರೆ. ಇಲ್ಲಿ ಇಮ್ರಾನ, ಶಾಭಾನು ರಂತಹವರಿಗೆ ಏನೆನಿಸುತ್ತದೆ, ಅವರ ಭಾವನೆಗಳೇನು ಎನ್ನುವುದು ಯಾರಿಗೂ ಮುಖ್ಯವಲ್ಲ. ಧರ್ಮ, ರಾಜಕೀಯ, ಓಟು ಇವುಗಳ ಸಿಕ್ಕಿನೊಳಗೆ ಈ ಮಹಿಳೆಯರ ವ್ಯಕ್ತಿತ್ವದ ಅಯಾಮಗಳಿಗೆ, ಅಭಿಪ್ರಾಯಗಳಿಗೆ ಬೆಲೆ, ಗೌರವ ಯಾವುದೂ ಇಲ್ಲವಾಗುತ್ತದೆ.

ಅತ್ಯಾಚಾರ ಎಲ್ಲಾ ಧರ್ಮದ ಮಹಿಳೆಯರ ಮೇಲೂ ನಡೆಯುತ್ತಲೇ ಇರುತ್ತವೆ. ಸ್ವಂತ ಅಪ್ಪನಿಂದಲೇ ಚಿಕ್ಕ ಚಿಕ್ಕ ಹೆಣ್ಣು ಮಕ್ಕಳು ಅತ್ಯಾಚಾರ ಕ್ಕೊಳಗಾಗುತ್ತಲೇ ಇದ್ದಾರೆ. ಆದರೆ ಇವು ರಾಷ್ಟ್ರದುದ್ದ ಚರ್ಚೆಯ ವಿಚಾರಗಳಾಗುವುದಿಲ್ಲ, ವಿವಾದ ಹುಟ್ಟಿಸುವುದಿಲ್ಲ, ಭಿನ್ನಾಭಿಪ್ರಾಯ ಹುಟ್ಟು ಹಾಕುವುದಿಲ್ಲ. ಇವು ಧರ್ಮದ ಘರ್ಷಣೆ ಹುಟ್ಟು ಹಾಕುವುದಿಲ್ಲ ವಾದ್ದರಿಂದ ಇಮ್ರಾನ, ಶಾಭಾನು ರಂತಹ ಪ್ರಕರಣಗಳು ಮಾತ್ರ ಮಾದ್ಯಮದವರಿಂದ ಹಿಡಿದು ರಾಜಕೀಯದವರೆಗೂ 'ಆಸಕ್ತಿ' ಹುಟ್ಟಿಸುವ ವಿಚಾರಗಳಾಗಿ ಬಿಡುತ್ತವೆ.

ಎಲ್ಲಾ ಧರ್ಮದ, ಜಾತಿಯ ಮಹಿಳೆಯರಿಗೂ 'ಮನಸ್ಸು' 'ಮಾನವ ಹಕ್ಕು' ಇದೆ ಎಂಬುದನ್ನು ಮೊದಲು ಗುರುತಿಸಬೇಕು. ಇದು ಮನುಷ್ಯತ್ವದ ನೆಲೆಯಲ್ಲಿ, ಮಾನವೀಯ ನೆಲೆಯಲ್ಲಿ ನಡೆಯಬೇಕಾದ ಕೆಲಸ. ಯಾವ ಮೂಲಭೂತವಾದಿಗಳೂ ಮಹಿಳೆಯರ ಬದುಕುವ ಹಕ್ಕನ್ನು ಕಸಿದುಕೊಂಡು ವಿನಾಶಕ್ಕೆ ತಳ್ಳಬಾರದು. ಆಕೆಯ ಅಭಿಪ್ರಾಯ, ನಿರ್ಧಾರ ಹಕ್ಕುಗಳನ್ನು ಗೌರವಿಸುವಂತಹ ನ್ಯಾಯಗಳಿಗಾಗಿ ಮಾತ್ರ ನಾವು ಇಂದು ಹೋರಾಟ ನಡೆಸಬೇಕಾಗಿದೆ. ಯಾವ ಧರ್ಮವಾಗಲೀ, ಪಂಚಾಯಿತಿಯಾಗಲೀ, ಅಧಿಕಾರವಾಗಲೀ, ಸರ್ಕಾರವಾಗಲಿ ಮಹಿಳೆಗೆ ಇರುವ ಮೂಲಭೂತ ಬದುಕುವ ಹಕ್ಕನ್ನು ಕಸಿದುಕೊಳ್ಳದಿರುವಂತೆ ನಾವು ನಮ್ಮನ್ನು ಬಲಪಡಿಸಿಕೊಳ್ಳುವ ಅಗತ್ಯವೂ ಇದೆ.

# ಬದಲಾಗುತ್ತಿರುವ ಸಂದರ್ಭದಲ್ಲಿ ಮಹಿಳಾ ಚಳುವಳಿಯ ಮುಂದಿರುವ ಸವಾಲುಗಳು

90ರ ದಶಕದ ಮಹಿಳಾ ಚಳುವಳಿ ಹಾಗೂ ಮಹಿಳಾ ಅಧ್ಯಯನಗಳು ಹೊಸ ಹಾಗೂ ಮಹತ್ತರವಾದ ಸವಾಲುಗಳನ್ನು ನಮ್ಮ ಮುಂದಿಟ್ಟಿವೆ. ಚುನಾವಣಾ ರಾಜಕೀಯದ ಹಿನ್ನಲೆಯಲ್ಲಿ ಮಹಿಳೆಯರಿಗಿರುವ ಅವಕಾಶಗಳು ಕಡಿಮೆಯಾಗುತ್ತಿವೆ. ನಮ್ಮ ಸುತ್ತಲಿನ ಸಮಸ್ಯೆಗಳು, ಚಟುವಟಿಕೆಗಳು, ಅಧ್ಯಯನಗಳು ಸಾರ್ವಜನಿಕ ಚರ್ಚೆಗಳು ಸಾಮೂಹಿಕವಾಗಿ ನಮ್ಮ ಭಾಗವಹಿಸುವಿಕೆಯನ್ನು ಒತ್ತಿ ಹೇಳುತ್ತಿವೆ. ಒಂದೇ ಸಮಸ್ಯೆಯನ್ನು ಕೇಂದ್ರೀಕರಿಸುವುದನ್ನು ಬಿಟ್ಟು ಒಟ್ಟಾರೆಯಾಗಿ ಎಲ್ಲ ಸಮಸ್ಯೆಗಳತ್ತ ಗಮನ ಹರಿಸಬೇಕಾಗಿದೆ.

ಕೋಮುವಾದದ ಬೆಳವಣಿಗೆ, ಮಹಿಳೆಯರ ಜೀವನದ ಮೇಲೆ ಪರಿಣಾಮ ಬೀರುತ್ತಿರುವ ಆರ್ಥಿಕ ಪರಿಣಾಮಗಳು, ಅವರ ಮೇಲೆ ಹೆಚ್ಚುತ್ತಿರುವ ಹಿಂಸೆ, ನಮ್ಮನ್ನು ಆತಂಕಕ್ಕೆ ತಳ್ಳುತ್ತಿವೆ. ಈ ಸಮಸ್ಯೆಗಳ ಬೇರು ನಮ್ಮ ಹಳೆಯ ವ್ಯವಸ್ಥೆಯಲ್ಲಿ ಇರಬಹುದು. ಕೆಲವು ಹೊಸದಾಗಿಯೇ ಸೃಷ್ಠಿಯಾಗಿರಬಹುದು. ಆದರೆ ಸ್ತ್ರೀವಾದಿಗಳೆಲ್ಲ ಈ ಎಲ್ಲಾ ಸಮಸ್ಯೆಗಳಿಗೆ ಒಂದು ರೀತಿಯ ಸಾಮಾನ್ಯಿ ಕರಿಸಿದ ಸೂತ್ರದ ಪ್ರತಿಕ್ರಿಯೆ ನೀಡಿದ್ದಾರೆಯೇ ಹೊರತು ರಾಜಕೀಯ ಪರಿಸ್ಥಿತಿ, ಆರ್ಥಿಕ ಸುಧಾರಣೆ, ಮುಂತಾದವು ಮಹಿಳೆಯರ ಜೀವನದ ಮೇಲೆ ಬೀರಿರುವ ಪರಿಣಾಮದ ಹಿನ್ನಲೆಯಲ್ಲಿ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುತ್ತಿಲ್ಲ.

ಮಹಿಳಾ ಚಳುವಳಿಯಲ್ಲಿ ಹಳೆಯ ತಂತ್ರಗಳು ನಿಲುಗಡೆಯ ಹಂತವನ್ನು ತಲುಪಿವೆ. ಮಹಿಳಾ ಸಮಸ್ಯೆಗಳನ್ನು ಕೇವಲ ಕಾನೂನಿನ ಮೂಲಕ ಪರಿಹಾರವನ್ನು ಕಂಡುಕೊಳ್ಳುವುದರ ಮೂಲಕ ಸಮಾಜದಲ್ಲಿನ ಧೋರಣೆಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬುದರ ಅರಿವು ನಮಗಾಗಿದೆ. ಮಹಿಳಾ ಚಳುವಳಿಯಲ್ಲಿ ಕಾನೂನಿನ ಸಮರವೇ ಪ್ರಮುಖ ಅಸ್ತ್ರವಾಗಿದೆ.

ಸಮಾಜದ ಬದಲಾವಣೆಗಾಗಿ ಹಿಂದುತ್ವ ಸ್ತ್ರೀವಾದಿಗಳ ಪರಿಭಾಷೆಯನ್ನು ತನ್ನ ವಿಭಿನ್ನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದೆ. ಪ್ರಗತಿಪರಶಕ್ತಿಗಳು ಒಂದು ಗೂಡುವುದನ್ನು ಹಿಂದುತ್ವದ ಶಕ್ತಿಗಳು ಯಶಸ್ವಿಯಾಗಿ ತಡೆದಿದೆ.

ಹೀಗೆ ಹಿಂದೆಕ್ಕೆಳೆಯುವ ಶಕ್ತಿಗಳಿಗೆ ಬಲ ಹೇಗೆ ಬಂತು ? ಇದು ದುತ್ತೆಂದು ನಮ್ಮ ಕಣ್ಣೆದುರಿಗೆ ಬಿದ್ದಿತೆ ? ಸ್ತ್ರೀವಾದಿಗಳು ಇದನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಿದ್ದಾರೆ. ಹಿಂದುತ್ವ ಒಂದು ಬಲವಾದ ವಿಚಾರಧಾರೆ. ಅಲ್ಲಿ ಬದ್ಧತೆಯಿರುವ ಕಾರ್ಯಕರ್ತರಿದ್ದಾರೆ. ಜಾತ್ಯಾತೀತ ಶಕ್ತಿಗಳನ್ನು ಹೋಲಿಸಿದರೆ ಅದರ ಮುಂದೆ ಸಪ್ಪೆಯಾಗಿ ಕಾಣುತ್ತದೆ. ಅದರ ಪ್ರಭಲ ವಿಚಾರಧಾರೆ, ಹಾಗೂ ಜನರು ಅದರೊಂದಿಗೆ ಗುರುತಿಸಿಕೊಳ್ಳುವುದನ್ನು ಸ್ತ್ರೀವಾದಿಗಳು ಹಗುರವಾಗಿ ಕಂಡಿದ್ದಾರೆ. ನಾವು ನಮ್ಮ ಕೆಲಸವನ್ನು ತಳಮಟ್ಟದಿಂದ ಪ್ರಾರಂಭ ಮಾಡಿ ನಿರಂತರವಾಗಿ ಹಾಗೂ ವ್ಯವಸ್ಥಿತವಾಗಿ ಮಾಡಬೇಕಾಗಿದೆ.

ವಿದೇಶಿ ಏಜೆನ್ಸಿಯಿಂದ ಹಣ ಪಡೆಯುತ್ತಿರುವ ಸ್ವಯಂಸೇವಾ ಸಂಸ್ಥೆಗಳು ಮಹಿಳಾ ಒಕ್ಕೂಟದ ಮೂಲಕ ನಡೆಸುತ್ತಿದ್ದ ಹೋರಾಟವನ್ನು ಬದಿಗೊತ್ತಿದವು. ಬಹುಪಾಲು ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರಿ ಕಾರ್ಯಕ್ರಮಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಮಾಡಿದವು. ಜನರು ಸ್ವಯಂ ಸ್ಪೂರ್ತಿಯಿಂದ ಸಂಘಟನೆಯಾಗುವ ಅಗತ್ಯ ಇವರಿಗಿರಲಿಲ್ಲ. ಈ ಹಿನ್ನಲೆಯಲ್ಲಿ ಸಮ್ಮೇಳಗಳನ್ನು ನಡೆಸುವ, ಒಕ್ಕೂಟಗಳನ್ನು ರಚಿಸುವ ವಿಧಾನಗಳಲ್ಲಿ ಹಲವಾರು ಬದಲಾವಣೆಗಳನ್ನು ನೋಡಬಹುದು. ಸ್ವಯಂ ಸೇವಾ ಸಂಸ್ಥೆಗಳು ಸಹ ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ಆದರೆ ಅವು ತೀರಾ ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುತ್ತಿವೆ. ಅವುಗಳ ಕ್ಷೇತ್ರ ತುಂಡು ತುಂಡಾಗಿವೆ. ಹಾಗಾಗಿ ಇವು ಜನರನ್ನು ಪ್ರತಿನಿಧಿಸುತ್ತದೆಯೆಂದು ಹೇಳಲು ಸಾಧ್ಯವಿಲ್ಲ. ಆದರೆ 'ಸೇವಾ' ಹಾಗೂ 'ಅನ್ನಪೂರ್ಣ' ದುಡಿಯುವ ಮಹಿಳೆಯರ ವೇದಿಕೆ ವಿಭಿನ್ನವಾಗಿ ಕೆಲಸ ಮಾಡುತ್ತಿವೆ. ಉದ್ಯೋಗದ ಅವಕಾಶಗಳು ಕುಂಠಿತವಾಗುತ್ತಿರುವ ಸಂದರ್ಭದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಪರ್ಯಾಯ ಉದ್ಯೋಗ ಅವಕಾಶವನ್ನು ನೀಡುತ್ತಿವೆ. ಗ್ರಂಥಾಲಯ ಪತ್ರಿಕೆಗಳನ್ನು ಪ್ರಕಟಿಸುವುದು, ಸ್ತ್ರೀ ಸಮಾನತೆಗಾಗಿ ತರಬೇತಿ ನೀಡುವುದು ಇಂತಹ ಚಟುವಟಿಕೆಗಳಿಂದಾಗಿ 80 ರ ದಶಕ ಮಹಿಳೆಯರನ್ನು ಸಂಘಟಿಸುವ ಒತ್ತು ಬದಲಾಯಿತು. ಸ್ತ್ರೀವಾದ ಎತ್ತಿದ ಮಹಿಳಾ ಪ್ರಶ್ನೆಗಳನ್ನು ಸರ್ಕಾರ ಅಂತರಾಷ್ಟ್ರೀಯ ಒತ್ತಡದಿಂದಾಗಿ ತನ್ನ ಪಾಲಿಸಿಯಲ್ಲಿ ಸೇರಿಸಿದ್ದರಿಂದ ಸಹ ಈ ನಿಷ್ಕ್ರಿಯತೆಯನ್ನು ಕಾಣಬಹುದೇನೋ ?

ಇಂತಹ ಸರ್ಕಾರಿ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಮಹಿಳೆಯರ ದೈನಂದಿನ ಜೀವನವನ್ನು ತಲುಪಿದವು ? ಬಹುಪಾಲು ಸರ್ಕಾರಿ ಕಾರ್ಯಕ್ರಮಗಳು ಚಳುವಳಿಯ ಪರಿಭಾಷೆಯನ್ನು ಉಪಯೋಗಿಸಿದರು. ನಿಜಾರ್ಥದಲ್ಲಿ ಅದು ಮಹಿಳೆಯರ ಸಮಸ್ಯೆಗಳನ್ನು ಅರ್ಥಮಾಡಿಕೊಂಡ ನೆಲೆಯೇ ಬೇರೆಯಾಗಿದೆ. ಈ ಪ್ರಕ್ರಿಯೆಯು ಒಂದು ಮಹತ್ವವಾದ ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ. "ಸಾಂಸ್ಥೀಕರಣ ಗೊಂಡ ಮಹಿಳಾ ಅಜೆಂಡಾದಿಂದ ನಮಗೆ ಸಹಾಯವಾಗಿದೆಯೆ ? ಇಂತಹ 'ಜಂಡರ್' ತರಬೇತಿಗಳು ಹೆಚ್ಚುತ್ತಿರುವುದನ್ನು ನಾವು ಗಮನಿಸಬೇಕು. ತರಬೇತಿಯಲ್ಲಿ ನಿರ್ಧಿಷ್ಟವಾಗಿ ಏನು ಹೇಳಿಕೊಡಲಾಗುತ್ತಿದೆ ? ಯಾವ ಪರಿಕಲ್ಪನೆಯನ್ನು ಉಪಯೋಗಿಸಲಾಗುತ್ತಿದೆ ? ಯಾವ ವಿಧಾನದಲ್ಲಿ, ಏನನ್ನೂ ಹೇಳಿಕೊಡಲಾಗುತ್ತದೆ ಎನ್ನುವುದು ಬಹುಮುಖ್ಯ ವಾಗುತ್ತದೆ.

'ಜಂಡರ್' ಎಂಬ ಪರಿಭಾಷೆಯನ್ನು ಬಳಸುವುದರಿಂದ ಅನುಕೂಲ ಹಾಗೂ ಅನಾನುಕೂಲ ಎರಡೂ ಇದೆ. ಇದು ಹೆಚ್ಚು ಅಭದ್ರತೆಯನ್ನು ಉಂಟು ಮಾಡಲಾರದು. ಆದರೆ ಇದು ಸ್ತ್ರೀಯನ್ನು ಕೇಂದ್ರ ಸ್ಥಾನದಿಂದ ಮರೆಮಾಡುತ್ತದೆ. ಜಂಡರ್ ಎಂದರೆ 'ಸ್ತ್ರೀ' ಎಂದಾಗಿ ಬಿಟ್ಟಿದೆಯೇ ವಿನಃ ಸ್ತ್ರೀ ಪುರುಷರ ಸಮಾನತೆ ಗೆ ಒತ್ತು ನೀಡುವುದಿಲ್ಲ. ಅದೇ ರೀತಿಯಲ್ಲಿ 'ಸಶಕ್ತತೆ' ಎಂಬ ಪದದ ಬಳಕೆಯು ಸಹ . ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಸ್ತ್ರೀ ಪುರುಷರ ಅಧಿಕಾರದ ಸಮಾನತೆಯ ಹಿನ್ನಲೆಯಲ್ಲಿ ನೋಡುತ್ತಿಲ್ಲ.

ಇಲ್ಲಿ ಇರುವ ಇನ್ನೊಂದು ಸಮಸ್ಯೆಯೆಂದರೆ 'ಎಲ್ಲಾ ಸ್ತ್ರೀಯರನ್ನು ಒಂದು ಸಮುದಾಯ' ಎಂದು ನೋಡಲಾಗುತ್ತಿದೆ. ಕಡಿಮೆಯಾಗುತ್ತಿರುವ ಉದ್ಯೋಗದ ಅವಕಾಶದ ಹಿನ್ನಲೆಯಲ್ಲಿ ಪುರುಷರ ಬದಲಾಗಿ ಸ್ತ್ರೀಯರ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹೊರಿಸಲಾಗುತ್ತಿದೆ. ಭಾಷೆಯಲ್ಲಿನ ಪರಿಭಾಷೆ ಕೂಡಾ ಸ್ತ್ರೀವಾದದ ಅಜೆಂಡಾವನ್ನೂ ತಿಳಿಗೊಳಿಸಿ ಬಿಟ್ಟಿದೆ. ಜಾತಿ, ವರ್ಗದ ಮೇಲೆ ಒತ್ತನ್ನೂ ಹಾಕಿದ್ದರೂ ಕೂಡಾ ವ್ಯಕ್ತಿಗತ ನೆಲೆಯಲ್ಲಿ ಮಾತ್ರ ಜಾತಿ ವರ್ಗದ ತೊಡಕುಗಳ ಸಂಧಾನ ನಡೆದಿದೆ. ಸ್ಪರ್ಧಾತ್ಮಕ ಜಗತ್ತಿನ ಜೊತೆಯಲ್ಲಿ ಸೆಣಸಲು ಮಧ್ಯಮ ವರ್ಗದ ಮಹಿಳೆಯರಿಗೆ ಹೆಚ್ಚಿನ ಧ್ವನಿಯನ್ನು ನೀಡಿದೆ.

ಸಾಂಸ್ಥೀಕರಣ ಗೊಂಡ ಮಹಿಳಾ ಅಧ್ಯಯನದಿಂದಾಗಿ ತಿಳುವಳಿಕೆ ಜ್ಞಾನವನ್ನು ಹರಿಸುವುದರಿಂದ ಮೂಲಭೂತ ಬದಲಾವಣೆ-ಯನ್ನು ತರಬಹುದೆಂದು ಭಾವಿಸಲಾಗಿತ್ತು. ಇಂತಹ ಅಧ್ಯಯನ ಬೌದ್ಧಿಕವಾಗಿ ಹಮ್ಮಸ್ಸನ್ನು ನೀಡುತ್ತಿದ್ದರೂ, ದೈನಂದಿನ ಜೀವನದ ಸಮಸ್ಯೆಗಳನ್ನು ಎದುರಿಸುವಲ್ಲಿ ಇದು ಯಾವ ಒಳ ನೋಟವನ್ನು ಕೊಡಲಿಲ್ಲ.

ಆರ್ಥಿಕ ಸುಧಾರಣೆಯ ಬಗ್ಗೆ ಕೂಡಾ ಸ್ತ್ರೀವಾದಿಗಳ ದೃಷ್ಟಿಕೋನ ಅಪರಿಪೂರ್ಣವಾಗಿದೆ. ನಿರ್ಧಿಷ್ಟವಾದ ಕ್ಷೇತ್ರದ ಬಗ್ಗೆ ವಿಶ್ಲೇಷಣಾತ್ಮಕವಾದ ಅಧ್ಯಯನದ ಕೊರತೆ ಕಂಡು ಬರುತ್ತದೆ, ಉದಾರೀಕರಣ, ಜಾಗತೀಕರಣದ ವಿರುದ್ಧದ ನಿಲುವಿನಿಂದ ಕೇವಲ ಪ್ರಗತಿಪರರೆನಿಸಿ ಕೊಂಡರೆ ಸಾಲದು. ಇವು ಮಹಿಳೆ ಹಾಗೂ ಪುರುಷರ ಮೇಲೆ ಯಾವ ರೀತಿ ಪರಿಣಾಮವನ್ನು ಉಂಟು ಮಾಡುತ್ತದೆ ? ಎಲ್ಲಿ ಪ್ರಯೋಜನಕಾರಿಯಾಗಿದೆ ? ಎಲ್ಲಿ ಹೊಸ ಅವಕಾಶಗಳು ಸೃಷ್ಟಿಯಾಗುತ್ತಿದೆ ? ಮುಂತಾದವುಗಳನ್ನು ವಿಶ್ಲೇಷಿಸುವ ಅಗತ್ಯ ಜರೂರಾಗಿದೆ. ಇದುವರೆಗೂ ನಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದೆವು. ಇಂದು ಪರಿಸ್ಥಿತಿ ಬದಲಾಗಿದೆ. ಸರ್ಕಾರ ಏನು ಮಾಡಬೇಕು. ಏನು ಮಾಡಬಾರದು ಎಂಬುದರ ಅರಿವು ನಮಗಿರಬೇಕಾಗಿದೆ - ನಾವು ನಿಂತಲ್ಲೇ ನಿಲ್ಲದೇ, ಮುಂದೆ ನಡೆಯಬೇಕಾಗಿದೆ.

ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿದರೆ ಹಲವಾರು ಅಂಶಗಳು ನಮ್ಮ ಕಣ್ಣಿಗೆ ರಾಚುವಂತಿವೆ. ಚುನಾವಣಾ ರಾಜಕೀಯ ಜಾತಿ, ಧರ್ಮ ದ ಆಧಾರದ ಮೇಲೆ ನಡೆಯುತ್ತವೆ. ಭಾರತದಂತಹ ಪ್ರಜಾ ಪ್ರಭುತ್ವ ದೇಶದಲ್ಲಿ ಚುನಾವಣಾ ಪ್ರಕ್ರಿಯ ಹಲವಾರು ಮಹತ್ತರ ಪ್ರಶ್ನೆಗಳನ್ನು ಎತ್ತುತ್ತದೆ. ನಮ್ಮ ದೇಶದ ಅಸಂಖ್ಯಾತ ಅವಿದ್ಯಾವಂತ, ಅನಕ್ಷರಸ್ಥ ಜನರು ಸಂಸತ್ತಿಗೆ ನೇರವಾಗಿ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಎಷ್ಟರ ಮಟ್ಟಿಗೆ ಅರ್ಥಪೂರ್ಣ ? ಅವರು ವಿದೇಶಾಂಗ ನೀತಿ, ಬಜೆಟ್, ಮುಂತಾದ ಸಂಕೀರ್ಣ ವಿಚಾರಗಳನ್ನೂ ಹೇಗೆ ಅರ್ಥ ಮಾಡಿಕೊಳ್ಳಬಲ್ಲರು ? ಸಂಸತ್ತಿಗೆ ಆಯ್ಕೆಯಾಗುವ 500 ಜನರು ನೂರು ಕೋಟಿ ಜನರ ನಿಜವಾದ ಪ್ರತಿನಿಧಿಗಳೆ ? ಸಂಸತ್ತಿನ ಒಂದು ದಿನದ ಸಭೆಗೆ 75 ಲಕ್ಷ ವೆಚ್ಚವಾಗುತ್ತದೆ. ಇದು ಕೇವಲ ಒಂದು ದಿನದ ಸಭೆಯ ಖರ್ಚು. ಇನ್ನು ರಾಜ್ಯಸರ್ಕಾರದ ರಚನೆ. ಇಂತಹ ವಾತಾವರಣದಲ್ಲಿ ಮಹಿಳೆಯರು ರಾಜಕೀಯದಲ್ಲಿ ಎಂತಹ ಪಾತ್ರವನ್ನು ವಹಿಸಬಲ್ಲರು ? ಮಾಯಾವತಿಯಂತವರು ಯಾವುದೇ ಸಾರ್ವಜನಿಕ ಜವಾಬ್ದಾರಿಯಿಲ್ಲದೆ ತಮ್ಮ ಮನಸ್ಸಿಗೆ ಬಂದಂತೆ ನಡೆದು ಕೊಳ್ಳಬಲ್ಲರು.

ಇಂದಿನ ಸಂಪ್ರಾದಾಯಿಕ ರಾಜಕೀಯ ವಾತಾವರಣದಲ್ಲಿ ಸ್ತ್ರೀಯರು ರಾಜಕೀಯ ಅಧಿಕಾರವನ್ನು ಪಡೆಯುವುದು ಹೆಚ್ಚು

ಪರಿಣಾಮಕಾರಿಯಾಗಿರುವುದಿಲ್ಲ. ಅವರು ಪಡೆದಿರುವ ಅಧಿಕಾರವನ್ನು ಗೌರವ ಪೂರ್ಣವಾಗಿ ಚಲಾಯಿಸಲು ಸಾಧ್ಯವಾಗುವಂತಹ ವಾತಾವರಣ ನಿರ್ಮಾಣವಾಗ ಬೇಕಾಗುತ್ತದೆ. ಈ ಹಂತದಲ್ಲಿ ಮಹಿಳಾ ಮತದಾರರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಚುನಾವಣೆಯ ಬಗ್ಗೆ, ಅಭ್ಯರ್ಥಿಯ ಬಗ್ಗೆ, ಮತದಾರರ ಜವಾಬ್ದಾರಿಯ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಲಾಯಿತು. ಆದರೆ ಇಲ್ಲಿಯೂ ಹಲವಾರು ಸಂಕೀರ್ಣವಾದ ಸಮಸ್ಯೆಗಳು ಎದುರಾದವು. ಸ್ತ್ರೀಯರು ಜಾತಿ, ವರ್ಗದ ಹಿನ್ನಲೆಯಲ್ಲಿ ಹಂಚಿಹೋದುದರಿಂದ ಅವರನ್ನು ಒಂದು ಗುಂಪೆಂದು ಒಟ್ಟಿಗೆ ತರಲು ಸಾಧ್ಯವಾಗಲಿಲ್ಲ. ಹಾಗೂ ಹಣಕಾಸು, ಸಂಪನ್ಮೂಲದ ಕೊರತೆಯನ್ನು ಎದುರಿಸಬೇಕಾಯಿತು. ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಸಂಘಟಿಸುವ ಹಾಗೆ ಸ್ತ್ರೀಯರನ್ನು ಸಂಘಟಿಸಲು ಸಾಧ್ಯವಾಗಲಿಲ್ಲ. ಕುಟುಂಬದಲ್ಲಿ ಸ್ತ್ರೀ ಹಾಗೂ ಪುರುಷರ ಸಂಬಂಧವನ್ನು ಸಹಕಾರ, ಪ್ರೀತಿ, ಅಕ್ಕರೆ, ಪರಿಕಲ್ಪನೆಯ ಹಿನ್ನಲೆಯಲ್ಲಿ ನೋಡಲಾಗುತ್ತದೆಯೇ ವಿನಃ 'ಸಮಾನತೆ'ಯ ಹಿನ್ನಲೆಯಲ್ಲಿ ವ್ಯಾಖ್ಯಾನಿಸಲು ಅವಕಾಶವಿಲ್ಲ.

ಸ್ತ್ರೀ ಪುರುಷರ ಸಮಾನತೆಯ ಸಂವಿಧಾನಾತ್ಮಕ ಸಾಂಸ್ಥಿಕ ಬದಲಾವಣೆಯು ವ್ಯಕ್ತಿಗತ ಹೋರಾಟ ಹಾಗೂ ಸಾಮೂಹಿಕ ಹೋರಾಟವನ್ನು ಅವಲಂಬಿಸಿದೆ. ಕುಟುಂಬದಲ್ಲಿನ ವ್ಯಕ್ತಿಗತ ನೆಲೆಯ ಹೋರಾಟವನ್ನು, ಅದರ ಅನುಭವವನ್ನು ತಾವು ಕೆಲಸ ಮಾಡುವ ಸ್ಥಳ, ಸಮಾಜ ಹಾಗೂ ಪಾಲಿಸಿ ಮೇಕರ್ಸ್ ಮೇಲೆ ಬೀರಲು ಸಾಧ್ಯವೆ ? ಕುಟುಂಬ, ಸಮುದಾಯ ಹಾಗೂ ಸರ್ಕಾರದ ಮೇಲೆ ನಮ್ಮ ಪ್ರತಿಭಟನೆಯ ಪರಿಣಾಮ ಬೀರಬೇಕಾಗಿದೆ. ಉದಾಃ ಬಾಬ್ರಿದೇವಿಯ ವಿಚಾರ ತೆಗೆದು ಕೊಳ್ಳಬಹುದು.

ಬಾಲ್ಯವಿವಾಹವನ್ನು ತಡೆಯಲು ಪ್ರಯತ್ನಿಸಿದ ಆಕೆಯನ್ನು ಮೇಲ್ಜಾತಿಗೆ ಸೇರಿದ, ಜನರು ಅತ್ಯಾಚಾರ ಮಾಡಿದರು. ಮಹಿಳಾ ಸಂಘಟನೆಗಳು ಕೋರ್ಟ ನೀಡಿದ ತೀರ್ಪಿನ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಾಕಿದರು. ಈ ರೀತಿ ಕುಟುಂಬ ಸಮುದಾಯ ಸರ್ಕಾರದ ಮೇಲೆ ಪರಿಣಾಮ ಬೀರುವ ಸೇತುವೆಯಾಗ ಬೇಕಾಗಿದೆ. ನಿರಂತರವಾದ ಪ್ರಯತ್ನದಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಉನ್ನತ ಮಟ್ಟದಲ್ಲಿ ಆಗುವ ನಿರ್ಣಯಗಳು ಕೆಳಹಂತದಲ್ಲಿ ಜಾರಿಗೆ ಬರುವುದೇ ಇಲ್ಲ. ಸ್ಥಳೀಯ ಮಟ್ಟದಲ್ಲಿ ಭ್ರಷ್ಟಾಚಾರದಿಂದಾಗಿ ಜನರಿಗೆ ನ್ಯಾಯ ಸಿಗುವುದಿಲ್ಲ. ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಪ್ರಭಾವ ಬೀರುವುದು ಎಷ್ಟು ಮಹತ್ವವೋ ಸ್ಥಳೀಯವಾಗಿಯು ಪರಿಣಾಮ ಬೀರುವುದು ಅಷ್ಟೇ ಮುಖ್ಯವಾಗುತ್ತದೆ.

ಮಹಿಳೆ ಮತ್ತು ರಾಜಕೀಯ ವಿಷಯ ಬಂದಾಗ ಪ್ರಾತಿನಿಧ್ಯಕ್ಕಿಂತ ಮುಂದೆ ನಾವು ಹೋಗಬೇಕಾಗಿದೆ. ಹಲವಾರು ಸಂಕೀರ್ಣ ವಿಷಯಗಳತ್ತ ನಮ್ಮ ಗಮನವನ್ನು ಕೇಂದ್ರೀಕರಿಸಬೇಕಾಗುತ್ತದೆ. ನಾವು ರಾಷ್ಟ್ರೀಯ ವಿದ್ಯಾಮಾನದ ಒಂದು ಭಾಗವಾಗಿದ್ದೇವೆ. ಹಾಗಾಗಿ ಹಲವಾರು ಕ್ಷೇತ್ರಗಳಲ್ಲಿ ನಾವು ಭಾಗವಹಿಸ ಬೇಕಾಗುತ್ತದೆ. ನ್ಯಾಯವಾದ, ಮಾನವೀಯ ಸಾಮಾಜಿಕ ವ್ಯವಸ್ಥೆಯನ್ನು ಸೃಷ್ಠಿ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ.

ಸ್ತ್ರೀವಾದಿಗಳು ವಾದಿಸುವಂತೆ " ಮಹಿಳೆಯರ ಜೀವನ" ಐತಿಹಾಸಿಕವಾಗಿ ದಾಖಲಾಗದೇ ಹೋಗಿರುವುದು , "ವೈಯಕ್ತಿಕ ಜೀವನ" ರಾಜಕೀಯವಾದುದು ಎಂಬುದು ಅರ್ಥಪೂರ್ಣ-ವಾಗಿದೆ ನಿಜ. ಆದರೆ ಕೆಲವು ನಿರ್ಧಿಷ್ಟ ನಿದರ್ಶನಗಳಿಂದ ಸಾಮೂಹಿಕ ನಿಲುವಿಗೆ ಬರುವುದು ಕೆಲವು ಬಾರಿ ಅಪಾಯ ಕಾರಿಯಾಗುತ್ತದೆ. ಇಂದಿನ ಜಾಗತೀಕರಣ ದ ಹಿನ್ನಲೆಯಲ್ಲಿ ಕಾರ್ಪೊರೇಟ್ ಸೆಕ್ಟರ್‌ಗಳು ಸ್ತ್ರೀತ್ವದ ಪರಿಕಲ್ಪನೆಯನ್ನು ವ್ಯಕ್ತಿಗತ ನೆಲೆಯಲ್ಲಿ ವೈಭವೀಕರಿಸಿ, ವೈಯಕ್ತಿಕ ನೆಲೆಯಲ್ಲಿ 'ಸಾಧನೆ ಗೈದ ಮಹಿಳೆಯರು ಎಂಬ ಇಮೇಜ್‌ನ್ನು ನೀಡುತ್ತಿದೆ.'

ನಾವು ನೀಡುವ ಜಂಡರ್ ವಿಶ್ಲೇಷಣೆ ಅಸ್ಪಷ್ಟವಾಗಿದೆ. ಉದಾಹರಣೆಗೆ ಶ್ರಮವಿಭಜನೆಯು ಖಂಡಿತಾ 'ಅಧಿಕಾರ' ದ ಸಂಬಂಧವನ್ನೂ ಹೊಂದಿದೆ. ಪಿತೃಪ್ರಧಾನತೆಯ ಪರಿಕಲ್ಪನೆಯು ರಾಜಕೀಯ ಅಧಿಕಾರದೊಂದಿಗೆ ಸೇರಿಕೊಳ್ಳುತ್ತದೆ. ಆದರೆ ಸಾಮಾಜಿಕ ರಚನೆಯನ್ನು ಜಾತಿ, ವರ್ಗದ, ಜಂಡರ್, ಇವುಗಳ ಹಿನ್ನಲೆಯಲ್ಲಿ ನೋಡಿದಾಗ ಇವು ಬೇರೆ ಬೇರೆ ಯಾಗಿ ಕಾಣುತ್ತಿದೆ.

ನಮ್ಮ ಆರ್ಥಿಕತೆಯು ಬಲವಾದ ಗೃಹ ಉತ್ಪಾದನೆಯ ಆಧಾರವನ್ನು ಹೊಂದಿದೆ. ಆದರೆ ಈ ಆಧಾರದ ಮೇಲೆ ನಮ್ಮ ಪಾಲಿಸಿ ನಿರ್ಣಯಗಳ ಮೇಲೆ ಪರಿಣಾಮ ಬೀರುವುದು ದುರ್ಗಮವಾಗುತ್ತಿದೆ. ಅದೇ ರೀತಿಯ ಸಾಮಾಜಿಕ ರಚನೆಯಲ್ಲಿ ಜಾತಿ, ವರ್ಗ, ಜಂಡರ್‌ಗಳು ಸೂಕ್ಷ್ಮವಾಗಿ ತಳುಕು ಹಾಕಿಕೊಂಡಿ-ರುವುದರಿಂದ, ಅದರ ವಿಶ್ಲೇಷಣೆಯು ಕಷ್ಟಕರವಾಗುತ್ತದೆ. ಉಧಾಹರಣೆಗೆ ನಮ್ಮ ಬಜೆಟ್‌ನಲ್ಲಿ ಸಂಪನ್ಮೂಲದ ಹಂಚಿಕೆಯನ್ನು ಸ್ತ್ರೀಪುರುಷರ ಮಧ್ಯ ಹೇಗೆ ವಿಂಗಡಿಸುವುದು ? ನೀರಾವರಿ ಸೌಲಭ್ಯವನ್ನು ಸ್ತ್ರೀ ಪುರುಷರಿಬ್ಬರೂ ಎಷ್ಟು ಪ್ರಮಾಣದಲ್ಲಿ ಪಡೆಯುತ್ತಾರೆ? ಮಹಿಳೆ ಎಷ್ಟು ಪಡೆಯುತ್ತಾಳೆ?!

ಸ್ತ್ರೀವಾದಿ ವಿಶ್ಲೇಷಣೆಯು ನಿರ್ಲಕ್ಷಿಸಿದ ಇನ್ನೊಂದು ಅಂಶವೆಂದರೆ 'ಪುರುಷತ್ವ' ದ, ಪರಿಕಲ್ಪನೆ, ಅದರ ಸ್ವರೂಪ ಹಾಗೂ ಸಮಾಜದಲ್ಲಿ ಅದರ ಪಾತ್ರ. ಪುರುಷತ್ವಕ್ಕೆ ಅಧಿಕಾರ ಚಲಾಯಿಸುವುದು ಏಕೆ ಅಗತ್ಯವಾಗುತ್ತದೆ ? ಇದಕ್ಕೆ ಏಕೆ

ಪುರುಷತ್ವ ಅಗತ್ಯವಾಗುತ್ತದೆ. ಪುರುಷತ್ವದ ಅಭದ್ರತೆಗಳು ಯಾವುವು ? ಈ ವಿಷಯದ ಸುತ್ತಲೂ ಸುಧೀರ್ಘವಾದ ವಿಶ್ಲೇಷಣೆಯನ್ನು ಮಾಡುವ ಅಗತ್ಯವಿದೆ.

ಜಾಗತೀಕರಣವು ನಮ್ಮ ಆಯ್ಕೆ ಯಾಗದಿದ್ದ ಪಕ್ಷದಲ್ಲಿ ಯಾವ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆಯನ್ನು ತರಬೇಕೆಂಬುದನ್ನು ಯೋಚಿಸಬೇಕು. ಆಹಾರ ನೀತಿ, ಸಾಮಾಜಿಕ ಭದ್ರತೆ, ಉತ್ಪಾದನೆ ಮುಂತಾದವುಗಳ ಕ್ಷೇತ್ರದಲ್ಲಿ ಬದಲಾವಣೆಯನ್ನೂ ತರಲು ಪ್ರಯತ್ನ ಮಾಡಬೇಕಾಗುತ್ತದೆ. ಒಟ್ಟಾರೆಯಾಗಿ ಸಾಮಾಜಿಕ ಅಭಿವೃದ್ಧಿಯ ಮೇಲೆ ಹೆಚ್ಚು ಒತ್ತು ಹಾಕ ಬೇಕಾಗುತ್ತದೆ.

ಸ್ವಸಹಾಯ ಸಂಘಗಳು ಸಣ್ಣ ಉಳಿತಾಯದ ಬೀಜ ಮಂತ್ರವಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಹಲವಾರು ಬದಲಾವಣೆಗಳನ್ನು ಇದರ ಮೂಲಕ ತರಬಹುದೆಂದು ಭಾವಿಸಲಾಗಿದೆ. ಇದು ಉತ್ತಮ ಹಾಗೂ ಹಲವಾರು ಸಾಧ್ಯತೆ ಉಳ್ಳದ್ದಾದರೂ ಇದು ನಿಜವಾದ ಅಭಿವೃದ್ಧಿಗೆ ಅಗತ್ಯವಾದ ಅವಕಾಶಗಳನ್ನು ಸೃಷ್ಠಿ ಮಾಡಲಾರದು. ಒಟ್ಟಾರೆಯಾದ ಆರ್ಥಿಕ ವ್ಯವಸ್ಥೆ ಕುಸಿದು ಬೀಳುತ್ತಿರುವಾಗ ಸ್ವಸಹಾಯ ಸಂಘಗಳ ಮಾತ್ರ ಪ್ರತ್ಯೇಕವಾಗಿ 'ಅಭಿವೃದ್ಧಿಯನ್ನು ಸಾಧಿಸ ಬಲ್ಲವು ಎನ್ನುವುದು ಹೇಗೆ ಸಾಧ್ಯ?' 'ಸ್ವಸಹಾಯ' ಗುಂಪುಗಳು ಬಹುಪಾಲು ಮಹಿಳೆಯರಿಂದ ಕೂಡಿದ್ದು ಲೇಬರ್ ಮಾರ್ಕೆಟ್‌ನಲ್ಲಿ ಸ್ತ್ರೀಯರು ಹಲವಾರು ಮಿತಿಯನ್ನು ಹೊಂದಿರುವುದರಿಂದ ಅವರು ಪಡೆಯುವ ಲಾಭ ಸಹ ಪರಿಮಿತವಾಗಿರುತ್ತದೆ. ಸರಕಾರದ ನೆರವಿನಿಂದ ರಚಿತವಾದ ಸ್ವಸಹಾಯ ಗುಂಪುಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳಿಂದ ರಚಿತವಾಗಿರುವ ಸ್ವಸಹಾಯ ಗುಂಪುಗಳು ಉತ್ತಮವಾಗಿ ಫಲಿತಾಂಶವನ್ನು ಪಡೆದಿದ್ದರೂ ಉದ್ಯೋಗ, ಕುಶಲತೆ, ಆದಾಯ ಕ್ಷೇತ್ರದಲ್ಲಿ ಅವುಗಳ ಸಾಧನೆ ತುಂಬಾ ಕಡಿಮೆ.

ನಾವು ಜಾಗತೀಕರಣವನ್ನು ವಿರೋಧಿಸುತ್ತೇವೆಂದು ಹೇಳಿದರೆ ಮಾತ್ರ ಸಾಲದು. ನಮ್ಮ ಮುಂದೆ ಯಾವುದೇ ಆಯ್ಕೆ ಇಲ್ಲ. ಆದರೆ ನಮ್ಮ ಮುಂದೆ ಹಲವಾರು ಅವಕಾಶಗಳಿವೆ. (1) ಸರ್ಕಾರ ಏನು ಮಾಡಬೇಕೆಂಬುದನ್ನು ನಾವು ಒತ್ತಿ ಹೇಳಬೇಕು (2) ಉತ್ತಮ ಆಡಳಿತ (3) ಅಂತರಾಷ್ಟ್ರೀಯ ವ್ಯಾಪಾರದಲ್ಲಿ ನಮ್ಮ ನಿಜವಾದ ಹಿತಾಸಕ್ತಿಯನ್ನು ಕಾಪಾಡುವುದು, ಮಹಿಳೆಯರಿಗೆ ಅವಕಾಶವನ್ನು ನೀಡುವ, ನಾರು, ಬಿದಿರು, ಆಹಾರ ತಯಾರಿಕೆ, ಮಧ್ಯಾಹ್ನದ ಊಟ, ಮುಂತಾದ ಕಾರ್ಯಕ್ರಮಗಳನ್ನು ನಾವು ಪ್ರೋತ್ಸಾಹಿಸ ಬೇಕಾಗುತ್ತದೆ. 'ಸೇವಾ' ದಂತಹ ಸಂಘಟನೆಗಳ ಬಗ್ಗೆ ನಮ್ಮ ವಿಮರ್ಶಾತ್ಮಕ ಟೀಕೆ ಏನೇ ಇದ್ದರೂ ಅವು ಮಹಿಳೆಯರ ಚೌಕಾಸಿ ಶಕ್ತಿಯನ್ನು ಹೆಚ್ಚಿಸಿರುವುದು ನಿಜ.

ನಮ್ಮ ಅಧ್ಯಯನಗಳು ಹೆಚ್ಚು ಹೆಚ್ಚು ವಿಸ್ತೃತವಾಗಿರಬೇಕು ಸಾರ್ವಜನಿಕ ಚರ್ಚೆಗಳು ಆರೋಗ್ಯ ಪೂರ್ಣವಾಗಿರಬೇಕು. ಇಂತಹ ಚರ್ಚೆಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಸಕ್ರಿಯವಾಗಿ ಭಾಗವಹಿಸಬೇಕು.

ಮೂಲ : ಮೈತ್ರೇಯ ಕೃಷ್ಣರಾಜ್

ಕನ್ನಡಕ್ಕೆ : ರಾಜೇಶ್ವರಿ ಎಚ್.ಎಸ್.

********

# ಸ್ವಾತಂತ್ರ್ಯ ಮತ್ತು ಕರ್ನಾಟಕದ ಮಹಿಳೆಯ ಬಲಿದಾನದ ಫಲಶ್ರುತಿ ಇದೇ ಏನು?

**ಮಹಿಳೆಯರ ಮೇಲಿನ ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ವೇಶ್ಯಾಸಮಸ್ಯೆ, ಬಾಲಕಿಯರನ್ನು ವೇಶ್ಯಾವೃತ್ತಿಗಿಳಿಸುವುದು, ಅವರ ಹಕ್ಕುಗಳನ್ನು ಉಲ್ಲಂಘಿಸುವುದು, ವೃತ್ತಿಯಲ್ಲಿ ಅಸಮಾನತೆ, ವೇತನದಲ್ಲಿ ತರತಮ ಭೇದ, ಹೆಣ್ಣು ಶಿಶುವಿನ ಹತ್ಯೆ, ನ್ಯಾಯಾಂಗದಲ್ಲಿ ಕೂಡ ತಪ್ಪಿತಸ್ಥನಿಗೆ ಕಡಿಮೆ ಶಿಕ್ಷೆ. ಹೀಗೆ ಪಟ್ಟಿ ಮಾಡುತ್ತಾ ಹೊರಟರೆ ನಿಲುಗಡೆಯೇ ಇರದು. ಆ ಎಲ್ಲ ಸ್ತ್ರೀಯರೂ ಬಲಿದಾನ ಮಾಡಿ ತಂದುಕೊಟ್ಟ ಸ್ವಾತಂತ್ರ್ಯ ಇದೇ ಏನು ? ಯಾರು ಮಾಡಬೇಕು ಈ ಆತ್ಮಾವಲೋಕನ ?**

ವರ್ಷವಿಡೀ ಭಾರತದ ಸ್ವಾತಂತ್ರ್ಯ ಸುವರ್ಣೋತ್ಸವವನ್ನು ಆಚರಿಸಲಾಯಿತು. ಸ್ವಾತಂತ್ರ್ಯ ಯಾರಿಗೆ, ಎಷ್ಟು, ಎಂಬ ಬಗ್ಗೆ, ಕಳೆದ ಐವತ್ತರ ಫಲ, ನಾಳೆಗಳನ್ನು ಕಟ್ಟುವ ಯೋಜನೆ ಇತ್ಯಾದಿಗಳಾಗಲೀ, ಯಾವುದೇ ಬಗೆಯ ಆತ್ಮಾವಲೋಕನ-ವಾಗಲೀ ಆಯಿತು ಅನ್ನಿಸಲಿಲ್ಲ. ಎಲ್ಲವನ್ನೂ 'ಉತ್ಸವ' ಗೊಳಿಸುವದರಲ್ಲೇ ಸಂತೃಪ್ತಿಯಿದೆ ಅಂದುಕೊಳ್ಳುವ ಅಧಿಕಾರವರ್ಗ, ಸ್ವಲ್ಪಮಟ್ಟಿಗೆ ಸಮಾಜ ಕೂಡ ಅಗಬೇಕಾದ್ದರ ಕಡೆಗೆ ಗಮನ ಕೊಡುವುದನ್ನು ಬಹು ಜಾಣತನದಿಂದಲೇ ಹಿಂದಕ್ಕೆ ಸರಿಸಿಬಿಡುತ್ತದೆ..

ಇವೆಲ್ಲದರ ನಡುವೆಯೂ ಬೆಚ್ಚಿ ಬೀಳಿಸುವಂಥ ಕೆಲವು ಪ್ರಸಂಗಗಳೂ ನಡೆಯುತ್ತಿರುತ್ತವೆ ಎನ್ನಲು ನಮ್ಮೆದುರು 'ಗಾಂಧೀ ವಿರುದ್ಧ ಗಾಂಧಿ', 'ಗೋಡ್ಸೆ....' ನಾಟಕಗಳು, ಅವುಗಳಿಗೆ ಸಿಕ್ಕ ಪ್ರತಿಕ್ರಿಯೆಗಳು ಇವೆ. ಭಾರತ-ಪಾಕಿಸ್ತಾನಗಳೆರಡೂ ಅಣ್ವಸ್ತ್ರ ಸಾಧನೆಯನ್ನು ಸಾಬೀತುಪಡಿಸಿ ಸಂಭ್ರಮಿಸುತ್ತಿವೆ. ಮೀಸಲಾತಿಯ ಮಾತೆತ್ತಿ ಸ್ತ್ರೀಪರವಾಗಿಯೂ ಇದ್ದೇವೆಂಬ ಅಡ್ಡಪರದೆ ಹಿಡಿದುಕೊಂಡೇ ಮಹಿಳಾ ಮೀಸಲಾತಿಯ ಬಗ್ಗೆ ಸಿಡಿಯುತ್ತ ಮುಖ ಮರೆಸಿಕೊಂಡ ಪ್ರಗತಿಪರರೂ ನಮ್ಮೆದುರಿಗಿದ್ದಾರೆ !

"ಬಾಲ್ಯಾವಸ್ಥೆಯಿಂದಲೇ ನಮ್ಮಲ್ಲಿ ದಾಸ್ಯ ಪ್ರಜ್ಞೆ ಬಲವಾಗಿ ಬೆಳೆದು ಬಂದುಬಿಟ್ಟಿದೆ. ನಾವು ಸ್ವತಂತ್ರರಾಗಿ ಏನಾದಾರೊಂದನ್ನು ಚಿಂತಿಸಲು ಅಸಮರ್ಥರು... ನಾವು ಜಾತಿಯ ದಾಸರು. ಪಾಶ್ಚಾತ್ಯ ಶಿಕ್ಷಣದ ದಾಸರು. ಇನ್ನೂ ನಾವು ಸ್ವತಂತ್ರರಾಗಿ ನಡೆಯಬಲ್ಲವೆ?" ಎಂದು ಕೊರಗಿದ್ದರು ಗಾಂಧಿ.

ಕ್ರೂರ ಸಾಮಾಜಿಕ ಆಚರಣೆಗಳ ಮೇಲೆ ಮೃತ್ಯುಕಿರಣ ಚೆಲ್ಲಬಲ್ಲ ಸಮರ್ಥ ಪ್ರಜೆಗಳ ಅಗತ್ಯವಿದೆ ಎಂಬ ಹಿನ್ನೆಲೆಯಲ್ಲಿ.... "ಇಡೀ ದೇಹವೇ ಕೊಳೆತು ಹೋಗಿರುವಾಗ ದೇಹದಲ್ಲಿ ಎಲ್ಲೋ ಒಂದೊಂದು ಕಡೆ ಕೊಳೆಯದೇ ಉಳಿದಂತೆ ಕಾಣುತ್ತಿರುವ ಸಣ್ಣ ಭಾಗಗಳನ್ನು ಕಂಡು ನಾವು ತೃಪ್ತರಾಗುವುದಾದರೂ ಹೇಗೆ ಸಾಧ್ಯ?" ಇಂದು ನಮ್ಮ ಸಮಾಜ ಹೀಗಿದೆ. ಇಂಥ ಕೊಳೆತ ದೇಹದ ಒಳಭಾಗದಲ್ಲಿ, ಯಾವ ಭಾಗವಾದರೂ ಕೊಳೆಯದೇ ಉಳಿದಿದೆಯೇ ಎಂದು ಪರೀಕ್ಷಿಸಲು, ಅದನ್ನು ಕೊಯ್ದು ನೋಡುವುದು ತೀರಾ ಅಮಾನುಷವಾದದ್ದು. ಆದ್ದರಿಂದ, ಶವವಾಗಿ ಕೊಳೆತ ನಂತರ ಪರೀಕ್ಷಿಸುವುದಕ್ಕಿಂತ ಸುಸಂಸ್ಕೃತವೂ, ಉತ್ತಮವೂ, ಕ್ರೌರ್ಯರಹಿತವೂ ಆದ ರೀತಿಯನ್ನೇ ಪಾಲಿಸೋಣವಲ್ಲವೆ ? ಅದು ರೋಗಿಯು ಸತ್ತು ಕೊಳೆತ ಹಣವಾಗುವ ಮುಂಚೆ ಮಾಡುವ ಔಷಧೋಪಚಾರ.

**ಡಾ॥ ವಿಜಯಾ, ಬೆಂಗಳೂರು**

ಇದನ್ನು ಮೊತ್ತಮೊದಲು ಹಿಂದೂ ಧರ್ಮ ಕಲಿಯಬೇಕು. ಏಕೆಂದರೆ ಹಿಂದೂ ಧರ್ಮವು ಶವವನ್ನು ಕೊಯ್ದು ಕೊಯ್ದು ಪರೀಕ್ಷೆ ಮಾಡುವ ಕ್ರೂರ ಪದ್ಧತಿಯಲ್ಲಿ ಅದ್ವಿತೀಯವಾದದ್ದು, ಹಿಂದೂ ಧರ್ಮದ ಈ ಕ್ರೌರ್ಯವನ್ನು ಮೊದಲು ಇಲ್ಲವಾಗಿಸಬೇಕು.

"ಇದೇ ಸಮಾಜ, ಜನರ ನೈತಿಕ ಸ್ಥಿತಪ್ರಜ್ಞೆಯಿಂದ ರೂಪುಗೊಳ್ಳುತ್ತಿದೆ. ಎಲ್ಲಿಯವರೆಗೆ ನಮ್ಮ ಚಿಂತನೆ ಮತ್ತು ಕೃತಿಗಳು, ಬದುಕು ಸ್ವತಂತ್ರವಲ್ಲವೋ ಅಲ್ಲಿಯವರೆಗೆ ಪೂರ್ತಿ ಹರಿದು ಹೋದ ಸಮಾಜಕ್ಕೆ ತೇಪೆ ಹಾಕುವುದು ಅಥವಾ ಪೂರ್ತಿ ಕೊಳೆತಂತಾದ ಭಾರತೀಯ ಸಮಾಜ ಅಲ್ಲಲ್ಲಿ ಕೊಳೆಯದೇ ಉಳಿದುಕೊಂಡ ಚರ್ಮವನ್ನು ಪರಿಗಣಿಸಿ ವೈದ್ಯಕೀಯ ಪರೀಕ್ಷೆ ಮಾಡಲು ಹೋಗುವುದು ಎಂದರೆ ಏನೂ ಮಾಡದೇ ಸುಮ್ಮನೆ ಇರುವುದಕ್ಕಿಂತಲೂ ನೀಚತನವಾದೀತು..."

ಗಾಂಧೀಜಿಯವರ ಈ ಮಾತುಗಳ ಹಿಂದಿದ್ದ ನೋವು ಸಣ್ಣದಲ್ಲ. ಇಂದು ಆ ನೋವು ಉಲ್ಬಣಿಸಿದೆ, ವ್ರಣವಾಗಿದೆ. 'ಸರಿಪಡಿಸುವ' ಮಾತೇ ಭಯಂಕರ.... ಒಂದು ದುಃಸ್ವಪ್ನ ಅನ್ನಿಸುವ ಹಾಗೆ ನಮ್ಮ ಸಮಾಜದ ಸ್ಥಿತಿಯಿದೆ. ಇಂಥ ಹೊತ್ತಿನಲ್ಲಿ ನಮಗೆ ಬೆಳಕಿನ ಕಿರಣಗಳ ಹಾಗೆ ಕಾಣುವುದು ಕೆಲವೇ ಅಂಶಗಳು, ಅವು ಅಲ್ಲಿ-ಇಲ್ಲಿ ನಡಯುತ್ತಿರುವ ಗಂಭೀರ ಚಿಂತನೆಗಳು, ತೆಗೆದುಕೊಳ್ಳುವ ದಿಟ್ಟ ತೀರ್ಮಾನಗಳು ಮತ್ತು ಆಗಿ ಹೋದವರ ಚಿಂತನೆಯ ನೆರಳಲ್ಲಿ ಸತ್ಯ ಕಾದುಕೊಂಡೇ ಬದುಕಿದವರ ಬಲಿದಾನವಾದವರ ದರ್ಶನ-ನೆನಪುಗಳ ಸ್ಫೂರ್ತಿ.

ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಕುರಿತಂತೆ ಬರೆಯುವ ಪುಸ್ತಕದಲ್ಲಿ ಹಂತಹಂತವಾಗಿ ಮಹಿಳಾ ನಿಯೋಗಗಳು ಕಾನೂನು-ಸಂವಿಧಾನ ರೂಪಿಸುವಲ್ಲಿ ವಹಿಸಿದ ಪಾತ್ರ, ಅನೇಕ ಸುಧಾರಣೆ ಗಳನ್ನು ಜಾರಿಗೆ ತಂದ ಬಗೆ ಕುರಿತು ಹೇಳುತ್ತಾರೆ.

ಶ್ರೀಮಂತ ಪಾರ್ಸಿ ಕುಟುಂಬದಲ್ಲಿ 1861 ರಲ್ಲಿ ಜನಿಸಿದ ಭಿಕಾಜಿ ರುಸ್ತುಂ ಕಾಮಾ ದಿಟ್ಟ ಮಹಿಳೆ. ಬ್ರಿಟಿಷರ ಆಳ್ವಿಕೆ ಕೊನೆಗೊಂಡು ಸಮೃದ್ಧ ಸ್ವತಂತ್ರ ಭಾರತ ಆಗಬೇಕೆಂಬ ಕನಸು ಕಂಡ ವಿದ್ಯಾವಂತ ಮಹಿಳೆ. ಬ್ರಿಟಿಷರ ದಕ್ಷ ಆಳ್ವಿಕೆಯಿಂದ ಮಾತ್ರವೇ ಭಾರತದ ಉದ್ಧಾರ ಎಂದು ನಂಬಿದ್ದ ಆಕೆಯ ಪತಿ ನ್ಯಾಯವಾದಿ ರುಸ್ತುಂ ಕೆ.ಆರ್.ಕಾಮಾ ಅವರೊಂದಿಗೆ ಆಕೆಗೆ ಅಭಿಪ್ರಾಯ ಭೇದ ಬಂದದ್ದು ಸಹಜ. 1896ರ ಮುಂಬೈನ ಪ್ಲೇಗ್ ಪಿಡುಗಿನ ವೇಳೆ ಸುಖ ಜೀವನವನ್ನು ಕೈಬಿಟ್ಟು ಬಡಜನರ ಸೇವೆಗೆ ನುಗ್ಗಿದ ಮೇಡಂ ಕಾಮಾ ಕಷ್ಟದಲ್ಲಿದ್ದ ಜನರ ಪಾಲಿನ ಫ್ಲಾರೆನ್ಸ್ ನೈಟಿಂಗೇಲ್ ಆಗಿಬಿಟ್ಟರು. ಕಾಮಾ ಸಂಸಾರ ಬಂಧನ ಕಡಿದುಕೊಂಡು, ಸಮಾಜ ಸೇವೆಯಲ್ಲಿ ಗಾಢವಾಗಿ ತೊಡಗಿಕೊಂಡು, 1901ರಲ್ಲಿ ಇಂಗ್ಲೆಂಡಿಗೆ ತೆರಳಿದ ಶ್ರೀಮತಿ ಕಾಮಾ ದಾದಾಭಾಯಿ ನವರೋಜಿ ಅವರ ನೇತೃತ್ವದಲ್ಲಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿ ಇಂಗ್ಲೆಂಡಿನ ಜನತೆಗೆ ಭಾರತಕ್ಕೆ ಸ್ವಾತಂತ್ರ್ಯ ಬೇಕೆಂಬುದನ್ನು ಮನದಟ್ಟು ಮಾಡಿಕೊಟ್ಟರು. ಈ ಹೋರಾಟ ವಿಶ್ವದಲ್ಲಿ ನಡೆಯುವ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಲ್ಲಿ ಒಂದು ಎಂದು ಭಾವಿಸಿದ್ದ ಕಾಮಾ ತಿಲಕ್,

ಲಾಲಾ ಲಜಪತರಾಯ್, ಬಿಪಿನ್ ಚಂದ್ರಪಾಲ್ ಮೊದಲಾದ ತೀವ್ರಗಾಮಿಗಳನ್ನು ಬೆಂಬಲಿಸಿದರು. ಲಂಡನ್ನಿನಲ್ಲಿದ್ದು ಪತ್ರಿಕೆ ಹೊರಡಿಸಿ ಯೂರೋಪಿನಾದ್ಯಂತ ಪ್ರಗತಿಪರರನ್ನೂ, ಬುದ್ಧಿಜೀವಿಗಳನ್ನೂ ಒಂದುಗೂಡಿಸಿದ ಪಂಡಿತ ಕೃಷ್ಣಮೂರ್ತಿ, ರಾಣಾಜಿ ಮತ್ತು ಮೇಡಂ ಕಾಮಾ 'ತ್ರಿಮೂರ್ತಿ'ಗಳೆಂದೇ ಪ್ರಸಿದ್ಧರು.

"ನನ್ನ ಹೋರಾಟದ ವಿಧಾನವನ್ನು ಕುರಿತು ನಾನು ಬಹಿರಂಗವಾಗಿ ಮಾತನಾಡುತ್ತೇನೆ. ನನ್ನ ದೇಶದಲ್ಲಿ ನನ್ನ ಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ದೌರ್ಜನ್ಯಗಳನ್ನು ನೋಡಿಯೂ ಸಹಿಸಿಕೊಂಡು ಸುಮ್ಮನೆ ಕೂರಲು ಸಾಧ್ಯವಿಲ್ಲ.... ನಾನು ಹೆಂಗಸಾಗಿ ಹಿಂಸೆಯನ್ನು ವಿರೋಧಿಸಬೇಕೆಂದು ನೀವು ಕೆಲವರು ಭಾವಿಸಬಹುದು. ಆದರೆ ವಿವೇಚನೆಗೂ ಒಂದಿಷ್ಟು ಬೆಲೆಯಿದೆಯಲ್ಲವೆ ? ಯಾವ ದೇಶ ಬೆಲೆ ತೆರದೆ ತನ್ನ ವಿವೇಚನೆಯನ್ನು ಪಡೆದಿದೆ ?.... ನನ್ನ ಜೀವನದ ಏಕೈಕ ಆಸೆಯೆಂದರೆ ಆದಷ್ಟು ಬೇಗ ಭಾರತ ಸ್ವತಂತ್ರವಾಗಬೇಕು. 'ಭಾರತ ಭಾರತೀಯರಿಗೆ ಮಾತ್ರ' ಎಂಬುದು ನಮ್ಮ ಮಂತ್ರವಾಗಲಿ, ಸ್ವರಾಜ್ಯದ ನಿಜವಾದ ಅರ್ಥ ನಮಗೆ ಸಿಗುವಂತಾಗಲಿ, ಅದಕ್ಕಾಗಿ ಹೋರಾಡೋಣ."

ಮೇಡಂ ಕಾಮಾರವರ ಈ ಮಾತು ಕೇವಲ ಪ್ರಣಾಳಿಕೆಯಾಗಿ ಉಳಿಯದೆ ಕೃತಿಗಿಳಿಯಿತು. ಭಾರತದ ಸೋದರರಿಗೆ ಆಕೆ ಆಟಿಕೆಗಳೊಳಗೆ ರಿವಾಲ್ವರ್ ಬಚ್ಚಿಟ್ಟು ಕಳಿಸುವುದೇ ಮೊದಲಾದ ರೀತಿಯಲ್ಲಿ ಶಸ್ತ್ರಾಸ್ತ್ರಗಳನ್ನು ಒದಗಿಸಿದರು. ಯುದ್ಧದಲ್ಲಿ ನಂಬಿಕೆಯಿಟ್ಟ 'ಅಭಿನವ ಭಾರತ' ಸಂಸ್ಥೆಯಲ್ಲಿದ್ದು ಶ್ರಮಿಸಿದರು. ಅನೇಕ ಬಾಂಬ್ ಸ್ಫೋಟಗಳ ಹಿಂದೆ ಆಕೆಯ ಕೈವಾಡವಿತ್ತು ಎನ್ನಲಾಗುತ್ತಿದೆ.

ಬ್ರಿಟಿಷ್ ಸರಕಾರವು ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವಾರ್ಷಿಕೋತ್ಸವ ನಡೆಸಲು ನಿರ್ಧರಿಸಿತು. ಸಿಪಾಯಿ ದಂಗೆ (1857) ಒಂದು ವಿಫಲ ಪ್ರಯತ್ನ ಎಂದು ನಿರೂಪಿಸುವ ಪ್ರಯತ್ನವಾಗಿತ್ತು. ಆದರೆ ಇದನ್ನು ಲಂಡನ್ನಿನಲ್ಲಿದ್ದ ಭಾರತೀಯ ಕ್ರಾಂತಿಕಾರಿಗಳು ವಿರೋಧಿಸಿದರು. ಬ್ರಿಟಿಷರ ತಂತ್ರವನ್ನು ಮುರಿಯಲು ಪ್ರಯತ್ನಿಸಿದರು. ಮೇಡಂ ಕಾಮಾ ಬರೆದ ಕ್ರಾಂತಿಕಾರಿ ಕರಪತ್ರಗಳನ್ನು ಎಲ್ಲ ಕಡೆ ಹಂಚಲಾಯಿತು. ಭಾರತದಲ್ಲೂ ಹಂಚಲಾದ ಕರಪತ್ರದಲ್ಲಿ :

"ಹೇ ಹುತಾತ್ಮ ಬಂಧುಗಳೇ, ಮೇ 10, ಇದೇ ದಿನ 1857 ರಲ್ಲಿ ಸ್ಮರಣೀಯ ವರ್ಷದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಥಮವಾಗಿ ನೀವು ಆರಂಭಿಸಿದಿರಿ. 1857 ಅತೃಪ್ತ ಆತ್ಮಗಳೇ ! ಇಂದಿಗೆ ಐವತ್ತು ವರ್ಷಗಳು ಸಂದಿವೆ. ಆದರೆ ಈ ವಜ್ರಮಹೋತ್ಸವದಂದು ನೀವು ಅಂದು ಕಂಡ ಕನಸು ವಿಫಲವಾಗದೆ ಮೂರ್ತೀಭವಿಸುತ್ತದೆಂದು ನಾವು ಪ್ರತಿಜ್ಞೆ ಮಾಡುತ್ತೇವೆ ..."

ಸ್ವಾತಂತ್ರ್ಯಕ್ಕಾಗಿ ಹೋರಾಟ ವಿಫಲವಾಗುತ್ತದೆ ಎಂದು ಹೇಳುವ ಮೂಲಕ ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕುಗ್ಗಿಸಬೇಕೆಂಬ ಬ್ರಿಟಿಷರ ಹುನ್ನಾರವನ್ನು ಮೇಡಂ ಕಾಮಾರ ಪ್ರಯತ್ನಗಳು ಹುಸಿಗೊಳಿಸಿದವು. ಕರಪತ್ರಗಳನ್ನು ಹಂಚುತ್ತಿದ್ದ ಹಾಗೇ ಭಾರತದಲ್ಲಿಯ ತೀವ್ರಗಾಮಿ ನಾಯಕರಾದ ಲಾಲಾ ಲಜಪತರಾಯ್, ಸರ್ದಾರ್ ಅಜಿತ್‌ಸಿಂಗ್‌ರನ್ನು ಬಂಧಿಸಲಾಯಿತು. ಆದರೆ ಮೇಡಂ ಕಾಮಾ ನೇತೃತ್ವದಲ್ಲಿ ಲಂಡನ್, ಪ್ಯಾರಿಸ್ ನಗರಗಳಲ್ಲಿ ತೀವ್ರ ಪ್ರತಿಭಟನೆಗಳು ನಡೆದವು. ಮೇಡಂ ಕಾಮಾ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಸಾಮ್ರಾಜ್ಯ ಶಾಹಿಯ ವಿರೋಧಿಗಳಾಗಿದ್ದ ಇವರ ದೇಶವನ್ನು ಬೆಂಬಲಿಸಿ ಈ ಹೋರಾಟಗಳಿಗೆ ಒಂದು ಜಾಗತಿಕ ಸ್ವರೂಪವನ್ನೇ ಕೊಟ್ಟರು.

1907ನೇ ಆಗಸ್ಟ್ 18ರಂದು ಸ್ಟುಟ್‌ಗಾರ್ಟ್‌ನಲ್ಲಿ ಸೋಷಿಯಲಿಸ್ಟ್ ಅಂತರರಾಷ್ಟ್ರೀಯ ಸಮಾವೇಶವು ಏರ್ಪಾಡಾದಾಗ ಮೇಡಂ ಕಾಮಾ, ರಾಣಾಜಿ ಭಾಗವಹಿಸಿದರು. ಲೆನಿನ್, ಹೈಂಡ್‌ಮನ್, ರೋಸಾ ಲುಕ್ಸೆಂಬರ್ಗ್, ಆಗಸ್ಟ್ ಬೆಬೆಲ್ ಮೊದಲಾದವರೂ ಭಾಗವಹಿಸಿದ್ದ ಮಹತ್ವದ ಈ ಸಮಾವೇಶದಲ್ಲಿ ಮೇಡಂ ಕಾಮಾ ಭಾರತದ ಧ್ವಜವನ್ನು ಹಾರಿಸಿ ಮಾತನಾಡಿ "...ಸಮಾಜವಾದಿ ರಾಷ್ಟ್ರಗಳು ಒಂದು ದೇಶವು ನಿರಂಕುಶ ಪ್ರಭುತ್ವದ ದಬ್ಬಾಳಿಕೆಗೆ ಒಳಗಾಗುವುದನ್ನು ನೋಡಬಯಸುವುದಿಲ್ಲ. ಅದಲ್ಲದೆ ಸಾಮ್ರಾಜ್ಯಶಾಹಿ ಆಳ್ವಿಕೆಯು ಭಾರತದ ಆಳ್ವಿಕೆಗೆ ಧಕ್ಕೆ ತರುವಂತಹುದು. ಈ ಕಾರಣಗಳಿಂದ ಪ್ರಪಂಚದ ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳೂ ಜನಸಂಖ್ಯೆಯಲ್ಲಿ 1/5 ಭಾಗವಾದ ಭಾರತೀಯರಿಗೆ ಅವರು ತಮ್ಮ ಸಂಕೋಲೆಯಿಂದ ಮುಕ್ತರಾಗಲು ನೆರವು ನೀಡಬೇಕು. ಭಾರತದಲ್ಲಿ ಬ್ರಿಟಿಷರ ಆಡಳಿತ ಹೆಚ್ಚು ಕಾಲ ಮುಂದುವರಿದರೆ ಭಾರತೀಯರ ಬದುಕು. ಅತ್ಯಂತ ದುರ್ಭರವೂ ಅಸಹನೀಯವೂ ಆಗುತ್ತದೆ. ವಿಶ್ವದ ಎಲ್ಲೆಲ್ಲೂ ಇರುವ ಸ್ವಾತಂತ್ರ್ಯ ಪ್ರೇಮಿಗಳೇ, ಭಾರತೀಯರ ದಾಸ್ಯವನ್ನು ಕಳೆಯಲು ನಮ್ಮೊಡನೆ ದನಿಗೂಡಿಸಿ..." ಎಂದು ಕರೆಯಿತ್ತರು.

ಮೇಡಂ ಕಾಮಾ ಭಾರತದ ಧ್ವಜವನ್ನು ಇಂಗ್ಲೆಂಡಿನಲ್ಲಿ ಹಾರಿಸಿದ ಮೊಟ್ಟಮೊದಲ ಮಹಿಳೆಯಾದರೆ (ಪ್ಯಾರಿಸ್‌ನಲ್ಲಿ ತನ್ನ

ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿದ್ದು) 1935ರಲ್ಲಿ ಭಾರತಕ್ಕೆ ಬಂದು ನೆಲೆಸಿದ ಕಾಮಾ ಪತ್ರಕರ್ತೆ, ಅಂಕಣಕಾರ್ತಿ ಎಲ್ಲವೂ ಆಗಿದ್ದರು. 1936ರಲ್ಲಿ ಆಗಸ್ಟ್ 23ರ 'ಕೈಸರ್-ಇ-ಹಿಂದ್' ಪತ್ರಿಕೆಯಲ್ಲಿ ಆಕೆಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯ ಹೀಗೆ ಹೇಳುತ್ತಾರೆ :

"ಭಾರತದ ಶ್ರೇಷ್ಠ ಮಹಿಳೆಯೊಬ್ಬರು ಇಂದು ನಿಧನ ಹೊಂದಿದ್ದಾರೆ. ಈ ಮಹನೀಯಳನ್ನು ಕುರಿತು ಬಲ್ಲವರು ಈ ದೇಶದಲ್ಲಿ ಕೆಲವರೇ ಇರಬಹುದು. ಆದರೆ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಅಲ್ಲಿನ ಕ್ರಾಂತಿಕಾರಿಗಳ ವಲಯದಲ್ಲಿ ಬಹುದೊಡ್ಡ ಹೆಸರಾಗಿ ವಿಜೃಂಭಿಸಿದವರು ಮೇಡಂ ಕಾಮಾ..."

ಮೇಡಂ ಕಾಮಾ ಭಾರತದ ಕ್ರಾಂತಿಯ ಮಹಾಮಾತೆ, ಭಾರತೀಯ ಮಹಿಳೆ.

ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಪ್ರಸಿದ್ಧರ ಸಾಲು ಸಾಲೇ ಇದೆ. ಅಷ್ಟೇ... ಅಥವಾ ಅದರ ನೂರಪಟ್ಟು ಅಧಿಕವೋ ಎಂಬಷ್ಟು ಅದೃಶ್ಯ ಹೋರಾಟಗಾರ್ತಿಯರೂ ಇದ್ದಾರೆ. ತಮ್ಮದೇ ಮಿತಿ-ರೀತಿಗಳಲ್ಲಿ ಶ್ರಮಿಸಿ, ಅದರಿಂದಾಗಿ ಅನೇಕ ಕಷ್ಟಗಳಿಗೆ ಸಿಕ್ಕಿ, ಸದ್ದಿಲ್ಲದೆ ಸಹಿಸಿ ಹುತಾತ್ಮರಾದವರ ತೆರೆಮರೆಯ ತ್ಯಾಗಿಗಳಿವರು.

ಮನೆ ಮನೆಗೆ ಸ್ವಾತಂತ್ರ್ಯ ಚಳವಳಿಯನ್ನು ಕೊಂಡೊಯ್ದು ಗ್ರಾಮೀಣ ಮಹಿಳೆಯರು, ತಮ್ಮ ಮನೆಯ ಗಂಡಸರು ಚಳವಳಿಯಲ್ಲಿ ಭಾಗವಹಿಸಲು ಸಹಕರಿಸಿದವರು, ನೈತಿಕ ಬೆಂಬಲ ನೀಡಿದವರು, ಸೆರೆವಾಸ ಅನುಭವಿಸುತ್ತಿರುವ ಗಂಡಸರ ಸ್ಥಾನ ತಾವೇ ತುಂಬಿ ಧರಣಿ, ಕರಪತ್ರಗಳ ಹಂಚಿಕೆಯಲ್ಲಿ ತೊಡಗಿದವರು, ಪೋಲೀಸರ ದೌರ್ಜನ್ಯ ಸಹಿಸಿ, ಅವರ ಅಧಿಕಾರಿಗಳ ಕ್ರೌರ್ಯವನ್ನು ಪ್ರತಿಭಟಿಸಿ, ಕಾನೂನನ್ನು ಮುರಿದು ಸರ್ಕಾರವನ್ನು ಆಭದ್ರಗೊಳಿಸುತ್ತ ಸ್ತ್ರೀಶಕ್ತಿಯನ್ನು ಮೆರೆಸಿದ ಅನೇಕರು ಸದ್ದಿಲ್ಲದೆ, ಇತಿಹಾಸದ ಪುಟಗಳಿಗೆ ಬರಲಾರದೆ ಸರಿದಿದ್ದಾರೆ. ಅಂಥವರನ್ನು ಗುರುತಿಸಿ ಸ್ಮರಿಸುವ ಕೆಲಸವೂ ಬಹಳ ಮುಖ್ಯವಾಗುತ್ತದೆ..

1931ರ ಏಪ್ರಿಲ್ 6 ರಂದು ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದರು ಗಾಂಧಿ. ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯನ್ನು ಸತ್ಯಾಗ್ರಹದ ಕೇಂದ್ರ ಮಾಡಿಕೊಳ್ಳಲಾಯಿತು. ಕರ್ನಾಟಕದ ಎಲ್ಲ ಮೂಲೆಗಳಿಂದ ಹೆಂಗಸರು, ಮಕ್ಕಳು ಸಹಿತ ಭಾಗವಹಿಸಲು ಧಾವಿಸಿದರು.

ದತ್ತಾಬಾಯಿ ನಾರ್ವೇಕರ್ ಎಂಬುವವರ ದೊಡ್ಡಮನೆ ಸತ್ಯಾಗ್ರಹಿಗಳ ಶಿಬಿರ ಕಛೇರಿಯಾಗಿತ್ತು. ಏಪ್ರಿಲ್ 16ರ ವೇಳೆಗೆ ಸತ್ಯಾಗ್ರಹದಲ್ಲಿದ್ದ ನಾಯಕರನ್ನೆಲ್ಲ ಬಂಧಿಸಲು ಪ್ರಾರಂಭಿಸಿತ್ತು ಬ್ರಿಟಿಷ್ ಸರ್ಕಾರ. ಅಂಕೋಲೆಯ ಕಛೇರಿ ತೆರವು ಮಾಡಿಸುತ್ತಿತ್ತು. ಆದಾಗಲೇ ದೂರ ದೂರದಿಂದ ಬಂದು ಸೇರಿದ್ದ ಸತ್ಯಾಗ್ರಹಿಗಳನ್ನು ಉದ್ದೇಶಿಸಿ ಸತ್ಯಾಗ್ರಹಿ ಶ್ಯಾಮರಾಯಿ ಶೆಣೈ ಅವರ ಸೋದರಿ ಸೀತಾಬಾಯಿ ಸರಾಫ್ ಮಾತನಾಡಿದರು. ತಾಲ್ಲೂಕು ಕಛೇರಿಯ ಮುಂದೆ ಉಪ್ಪು ತಯಾರಿಸಲು ನಿಶ್ಚಯಿಸಲಾಗಿತ್ತು. ಅಧಿಕಾರಿಗಳ ಪೋಲೀಸರ ದಬ್ಬಾಳಿಕೆಯನ್ನು ಲಕ್ಷಿಸದೆ ಮಾತಾಡಿದ ಸೀತಾಬಾಯಿ -

'ತೆರಿಗೆ ನೀಡಿದ ಉಪ್ಪನ್ನು ನಾವ್ಯಾರೂ ತಿನ್ನಬಾರದು. ಉಪ್ಪಿನ ಸತ್ಯಾಗ್ರಹವೆಂದರೆ ನಮ್ಮ ಮೇಲೆ ಪರೋಕ್ಷವಾಗಿ ಹೇರಿರುವ ತೆರಿಗೆಯ ನಿರಾಕರಣೆ. ನಾವೇ ತಯಾರಿಸಿದ, ತೆರಿಗೆ ನೀಡದ ಉಪ್ಪನ್ನು ತಿನ್ನೋಣ" ಎಂದು ಹುರಿದುಂಬಿಸಿದರು.

ಆನಂದಿಬಾಯಿ ಹನಮಟ್ಟೇಕರ ಅವರು ಸಹ 'ಉಪ್ಪಿನ ಸತ್ಯಾಗ್ರಹ ನಮ್ಮ ಪವಿತ್ರ ಕರ್ತವ್ಯ' ಎಂಬ ಸಭೆಗೆ ಒತ್ತಿ ಹೇಳಿದರು. ಅಲ್ಲಿ ಸ್ತ್ರೀ-ಪುರುಷರು ಸೇರಿ ತಯಾರಿಸಿದ ಇಪ್ಪತ್ತು ಗುಡ್ಡೆ ಉಪ್ಪು ಕ್ಷಣಾರ್ಧದಲ್ಲಿ ಮಾರಾಟವಾಯಿತು !

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು 1930 ಮೇ 17 ರಂದು ಹುಬ್ಬಳ್ಳಿಯಲ್ಲಿ ಸಭೆ ಸೇರಿತು. ಸಾರಾಯಿ ನಿಷೇಧ ಪ್ರಚಾರ, ಸಾರಾಯಿ ಅಂಗಡಿಗೆ ಘೇರಾವ್-ವಿದೇಶೀ ವಸ್ತುಗಳ ಬಹಿಷ್ಕಾರ ಮೊದಲಾದ ಕೆಲವು ಯೋಜನೆಗಳನ್ನು ಹಾಕಿತು. ಸ್ವದೇಶಿ ಚಳವಳಿಯ ಒಂದು ಭಾಗವಾಗಿ ಪ್ರಾರಂಭವಾದ ಈ ಚಳವಳಿಯಲ್ಲಿ ಅಂಕೋಲದ ಶೆಣೈಯವರ ಹೆಂಡತಿ ಯಶೋಧಾ ವಿದೇಶೀ ಬಟ್ಟೆಗಳ ಬಹಿಷ್ಕಾರ ಚಳವಳಿಯ ನೇತೃತ್ವ ವಹಿಸಿದರು. ಮನೆಮನೆಗೂ ಹೋಗಿ ವಿದೇಶಿ ಬಟ್ಟೆಗಳನ್ನು ಸಂಗ್ರಹಿಸಿ, ಮನೆ ಮನೆಯಿಂದಲೂ ಚಳುವಳಿಗೆ ಮಹಿಳೆಯರನ್ನು ಮನವೊಲಿಸಿ ಕರೆತರಲಾಯಿತು. ಸಂಗ್ರಹವಾದ ಬಟ್ಟೆಗಳನ್ನು ಸುಟ್ಟುದೇ ಅಲ್ಲದೆ ಬಟ್ಟೆ ವ್ಯಾಪಾರಿಗಳಿಂದ ಸಹಿ ಹಾಕಿಸಿಕೊಂಡರು.

ಹೊರದೇಶಗಳಿಂದ ತಯಾರಾಗಿ ಬರುತ್ತಿದ್ದ ಬಳೆಗಳನ್ನು ಮಹಿಳೆಯರು ತೊಡುತ್ತಿದ್ದ ಕಾಲವದು. ಭಾಗೀರಥೀಬಾಯಿ ಎಂಬ ಮಹಿಳೆ ಸ್ವದೇಶದಲ್ಲಿ ತಯಾರಾದ ಬಳೆಗಳನ್ನು ಊರೂರು ಅಲೆದಾಡಿ ಮಾರಾಟ ಮಾಡಿ ವಿದೇಶೀ ಬಳೆಗಳನ್ನು ಕೊಳ್ಳದ ಹಾಗೆ ಮನವೊಲಿಸಿದರು.

ಅರಣ್ಯ ಸತ್ಯಾಗ್ರಹ ಆರಂಭಿಸಿದ್ದು ಮಳೆಗಾಲದಲ್ಲಿ. ಜೂನ್ ತಿಂಗಳ ಮಳೆ.... ಮನೆ ಮನೆಗೂ ಸತ್ಯಾಗ್ರಹದ ಕಾವು ಏರಿತ್ತು. ಸತ್ಯಗ್ರಹಕ್ಕೆ ಹೊರಟ ಪ್ರತಿನಿಧಿಗೆ ಆರತಿ ಬೆಳಗಿ ಕಳಿಸುತ್ತಿದ್ದರು.

ಅಂಕೋಲಾ ತಾಲೂಕಿನಲ್ಲಿ ಮುಕ್ಕಾಮಬಿಯ ಶ್ಯಾಮಭಟ್ಟರನ್ನು ಸತ್ಯಾಗ್ರಹದ ಮೊದಲೇ ಬಂಧಿಸಿದರು. ಅವರ ಪತ್ನಿ ಮುಂದೆ ಬಂದು ಅರಣ್ಯ ಸತ್ಯಾಗ್ರಹ ಪ್ರಾರಂಭಿಸಿದರು. "ನಾನು ಕಾನೂನನ್ನು ಉಲ್ಲಂಘಿಸಿದ್ದೇನೆ, ನನ್ನನ್ನು ಬಂಧಿಸಿ" ಎಂದರೂ ಪೊಲೀಸರು ಹೆದರಿ ಬಂಧಿಸಲಿಲ್ಲ. ಆಕೆ ಪೊಲೀಸು ಅಧಿಕಾರಿಗೇ ಕುಂಕುಮವಿಟ್ಟು ಸಮರಕ್ಕೆ ವೀಳ್ಯ ಕೊಟ್ಟರು, ಸಾರ್ವಜನಿಕ ಸಭೆಯಲ್ಲಿ -

" ನಾನು ಕಾನೂನು ಉಲ್ಲಂಘಿಸಿದ್ದರೂ ಬಂಧಿಸಿಲ್ಲ. ಇನ್ನು ಮುಂದೆ ಎಲ್ಲ ಮಹಿಳೆಯರೂ ಕಾನೂನು ಭಂಗ ಮಾಡೋಣ" ಎಂದು ಪ್ರಚೋದಕ ಭಾಷಣ ಮಾಡಿ ಕರೆಕೊಟ್ಟರು.

ಕರ ನಿರಾಕರಣೆಯ ಸತ್ಯಾಗ್ರಹದ ಸಂದರ್ಭದಲ್ಲಿ ಕಂದಾಯ ವಸೂಲಿಗಾಗಿ ಬಂದ ಅಧಿಕಾರಿ, ಸಿಬ್ಬಂದಿಗಳಿಗೆ ನಾಯಿ-ಪಾಡಾಯಿತು. ಹಳ್ಳಿಗರು ಅವರಿಗೆ ಏನೂ ಕೊಡಬಾರದೆಂದು ತೀರ್ಮಾನಿಸಿದ್ದರು. ಟೀ ತಯಾರಿಸಿಕೊಳ್ಳಲೂ ಪಾತ್ರೆ ಸಿಗಲಿಲ್ಲ. ಸಕ್ಕರೆ ಕೇಳಿದರೆ ಅಂಗಡಿಯ ಮಾಲೀಕರು 'ಇಲ್ಲ' ಎಂದರು, ಕಬ್ಬು ಕೊಡಿ ಎಂದಾಗ ರೈತ ಮಹಿಳೆ ಗದರಿಸಿ ಕಳಿಸಿದಳು. ತಂಗಲು ಸ್ಥಳ ನೀಡಿದ ಉಪಾಧ್ಯಾಯನೊಬ್ಬನನ್ನು ಹಳ್ಳಿಯಿಂದ ಹೊರಗೆ ಹಾಕಲಾಯಿತು.

ವಿಪರೀತ ಬಾಯಾರಿದ ಅಧಿಕಾರಿ ಬಾವಿಯ ನೀರು ಸೇದಲು ಬಿಂದಿಗೆ ಹುಡುಕಿ, ಸಿಗದೆ ಪರದಾಡಿದರು. ಆಕಸ್ಮಾತ್ತಾಗಿ ಒಂದು ಮನೆಯ ಮುಂದೆ ಇದ್ದ ಬಿಂದಿಗೆ ನೋಡಿ, ಅದನ್ನೇ ಎತ್ತಿ ತಂದಾಗ ಮನೆಯಾಕೆ ಆತನನ್ನು ಬಿಂದಿಗೆ ಕಳ್ಳ ಎಂದು ಆಪಾದಿಸಿ ಬೈದು ಬಿಂದಿಗೆ ಕಿತ್ತುಕೊಂಡೇ ಬಿಟ್ಟಳು. ಅಧಿಕಾರಿಯೊಬ್ಬರೊಂದಿಗೆ ವಾದಕ್ಕಿಳಿದ ತಿಪ್ಪಹನುಮಣ್ಣನಾಯಕ ಎಂಬಾತನ ಹೆಂಡತಿ. "ನಾವು ಗಾಂಧೀಜಿಯವರು ಹೇಳಿದ ಕರ ನಿರಾಕರಣೆ ಚಳವಳಿ ಮಾಡ್ತಿದ್ದೇವೆ. ನೀನು ಮಹಾತ್ಮನಷ್ಟು ತಿಳುವಳಿಕೆ ಇದ್ದೋನೇನಲ್ಲ. ನಿನ್ನ ಉದ್ಯೋಗಾನೇ ದೊಡ್ಡದಂತ ಭಾವಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಅಡ್ಡಿ ಮಾಡಬೇಡ. ನಿನಗೆ ಸ್ವರ್ಗ ಸಿಗಲ್ಲ, ನರಕವೇ ಗತಿ, ನೀನೂ ನಿನ್ನ ಕೆಲಸ ಬಿಟ್ಟು ಕರ ನಿರಾಕರಣೆ ಚಳವಳೀಲಿ ಸೇರಿಕೋ" ಅಂದು ದಬಾಯಿಸಿದಳು. ಅಲ್ಲಿಯವರೆಗೆ ತೆರಿಗೆ ಕೊಡಬೇಕು ಎಂತ ವಾದಿಸಿ, ಬೋಧಿಸುತ್ತಿದ್ದ ಆ ಅಧಿಕಾರಿ ಅದೇ 1931 ರ ಮಾರ್ಚ್ 5 ರಿಂದ ತೆರಿಗೆ ವಸೂಲಿಯನ್ನೇ ನಿಲ್ಲಿಸಿದ !

ಅಡಿಕೆ, ಬತ್ತ ಕೀಟದ ಹಾವಳಿಯಿಂದಾಗಿ ನಾಶವಾಗಿದ್ದವು. ರೈತರು ಕಷ್ಟದಲ್ಲಿದ್ದರು. ಇದಾವುದನ್ನೂ ಲಕ್ಷಿಸದೆ ತೆರಿಗೆ ಕೇಳಿ ಕೊಡಲಾಗದವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ, ಅವನ್ನೆಲ್ಲ ಹರಾಜು ಹಾಕಿ ಕಂದಾಯಕ್ಕೆ ಜಮಾ ಮಾಡುವ ದುಷ್ಪತನ ತೋರಿತು ಸರ್ಕಾರ, ಇದನ್ನು ವಿರೋಧಿಸಲು ಮಹಿಳಾ ಸ್ವಯಂ ಸೇವಕರ ಪಡೆಯೇ ಪ್ರಾರಂಭವಾಯಿತು. ದೊಡ್ಡಮನೆಯ ಮಹದೇವಿಯಮ್ಮ, ಕಾವೇರಮ್ಮ ಮೊದಲಾದವರ ನೇತೃತ್ವದಲ್ಲಿ ಹೊರಟ ಈ ಮಹಿಳಾ ಪಡೆಯು ಹರಾಜಿಗಿಟ್ಟ ಆಸ್ತಿಯನ್ನು ಕೊಳ್ಳುತ್ತಿದ್ದ ಸತ್ಯಾಗ್ರಹ ವಿರೋಧಿಗಳ ಮನೆಯ ಮುಂದೆ ಧರಣಿ ಕೂತು, ಅವರೊಂದಿಗೆ ಚರ್ಚೆಮಾಡಿ, ಮನವೊಲಿಸಿ ಅವರು ಕೊಂಡ ಪದಾರ್ಥಗಳನ್ನು ಹಿಂತಿರುಗಿ ಪಡೆಯಲು ಪ್ರಯತ್ನಿಸಬೇಕಿತ್ತು.

ಮೆರವಣಿಗೆ-ಸಭೆಗಳಿಗೆ ಬರುತ್ತಿದ್ದರೂ ಹೀಗೆ ಕಂಡವರ ಮನೆಯ ಮುಂದೆ ಕೂತು ಧರಣಿ, ಉಪವಾಸ ಮೊದಲಾದ್ದೆಂದರೆ ಹೆಂಗಸರಿಗೆ ಹಿಂಜರಿಕೆ. ವೆಂಕಟರಾಮಯ್ಯ ಎಂಬುವವರ ಹೆಂಡತಿ ಗೌರಮ್ಮ ದೊಡ್ಡಮನೆ ಮಹದೇವಿಯಮ್ಮ ಕಲ್ಲಾಳಿನ ಲಕ್ಷ್ಮಮ್ಮ ಕಾವೇರಮ್ಮ ಹಣಜೀಬೈಲಿನ ದುಗ್ಗಮ್ಮ , ತ್ಯಾಗ್ಲಿ ಭುವನೇಶ್ವರಮ್ಮ ಮೊದಲಾದವರು ಇಲ್ಲಿ ಮುನ್ನುಗ್ಗಿದರು. ಇತರರೂ ಅವರನ್ನು ಹಿಂಬಾಲಿಸಿದರು. ಇಲ್ಲಿಯ ಮೊದಲ ಸತ್ಯಾಗ್ರಹಿ ಗೌರಮ್ಮ. ಆಕೆಯ ಬವಣೆಗಳೇ ಒಂದು ಕಾದಂಬರಿಗಾಗುವಷ್ಟಿವೆ.

ಆಕೆ (1932 ಮಾರ್ಚ್ 20 ರಂದು) ಕಾವೇರಮ್ಮ ಲಕ್ಷ್ಮಮ್ಮನವರ ಜೊತೆ ಹಚ್ಚಿಹಳ್ಳಿಯ ರಾಮಪ್ಪ ಪಟೇಲರ ಮನೆಯ ಮುಂದೆ ಸತ್ಯಾಗ್ರಹ ಕುಳಿತರು. ಪಟೇಲರು ಕಡಿಮೆ ಬೆಲೆಗೆ ಎಮ್ಮೆಗಳನ್ನು (ಹರಾಜಿನಲ್ಲಿ) ಪಡೆದಿದ್ದರು. ಆ ಎಮ್ಮೆಗಳನ್ನು ವಾರಸುದಾರರಿಗೆ ಹಿಂತಿರುಗಿಸಲು ಪಟೇಲರು ಒಪ್ಪಲಿಲ್ಲ. ಈ ಮಹಿಳೆಯರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು.

ಮೂರು ದಿನವಾದರೂ ಪಟೇಲರೂ ಮಣಿಯಲೇ ಇಲ್ಲ. ಅತ್ತ ಸತ್ಯಾಗ್ರಹ ಸಭೆಗಳಲ್ಲಿ ಭಾಗವಹಿಸುತ್ತಿದ್ದ ಆಕೆಯ ಪತಿಗೂ ಆತಂಕ. ಮಕ್ಕಳ ಗತಿಯೇನು ಎಂಬ ಚಿಂತೆ. ಆದರೆ ಸತ್ಯಾಗ್ರಹ ನಿಲ್ಲಿಸು ಎಂದು ಹೇಳಲಿಲ್ಲ. ಹೆಂಡತಿ ಸಾಯುತ್ತಾರೆ ಎಂದೇ ಮನಸ್ಸನ್ನು ಗಟ್ಟಿಮಾಡಿಕೊಂಡರು. ಅವರು ಸಿದ್ಧಾಪುರದ ಸಭೆ ಮುಗಿಸಿ ಊರಿಗೆ ಬಂದಾಗ ಆಶ್ಚರ್ಯಕಾದಿತ್ತು. ಪಟೇಲ ಎಮ್ಮೆ ಹಿಂತಿರುಗಿಸಲು ಒಪ್ಪಿದ್ದ ! ಆದರೆ ಸಂಬಂಧಿಸಿದ ದಾಖಲೆ ಪತ್ರ ಕೊಡುವುದಿಲ್ಲ ಅಂದಿದ್ದರಿಂದ ಗೌರಮ್ಮ ಸತ್ಯಾಗ್ರಹ ಮುಂದುವರಿಸಿದರು. ಕಡೆಗೆ ಪಟೇಲನೇ ಮಣಿದು ಎಮ್ಮೆ ದಾಖಲುಪತ್ರ, ಹರಾಜಿನಲ್ಲಿ ಕೊಂಡ ಪಾತ್ರೆ-ಪಡಗ ಎಲ್ಲವನ್ನೂ ಹಿಂತಿರುಗಿಸಿದ. ಆಕೆ ಹಣ್ಣಿನ ರಸ ಕುಡಿದು ಉಪವಾಸ ಮುರಿದರು. ಈ ಜಯ ಮಹಿಳೆಯರಲ್ಲಿ ಉತ್ಸಾಹ-ಹುರುಪು ಮೂಡಲು ಕಾರಣವಾಯಿತು. ಹರಾಜಿನಲ್ಲಿ ವಸ್ತುಗಳನ್ನು ಕೊಂಡವರನೇಕರು ತಾವಾಗೇ ತಂದೊಪ್ಪಿಸತೊಡಗಿದರು.

ಮಹದೇವಪ್ಪಗೌಡ ಎಂಬಾತ ಸತ್ಯಾಗ್ರಹಿಗಳು ಬರುವ ಹೊತ್ತಿಗಾಗಲೇ ಬೇರೆಯವರಿಗೆ ತಾನು - ಕೊಂಡ ಎಮ್ಮೆಯನ್ನು ಮಾರಿಬಿಟ್ಟಿದ್ದ. ಅವನ ಮಾತಿಗೆ ಸೊಪ್ಪು ಹಾಕದೆ ಧರಣಿ ಕೂತವರನ್ನು ಎಬ್ಬಿಸಲು ಪೊಲೀಸರ ನೆರವು ಪಡೆದ. ಸತ್ಯಾಗ್ರಹಿಗಳನ್ನು ಬಡಿದರು, ಸಿದ್ದಾಪುರಕ್ಕೆ ಒಯ್ದರು. ಬಿಡದೆ ಘೋಷಣೆ ಕೂಗುತ್ತಿದ್ದ ಸ್ತ್ರೀಯರನ್ನು ಮತ್ತೆ ಮತ್ತೆ ಹೊಡೆದರು. ಅರ್ಧರಾತ್ರಿಗೆ ಗೌರಮ್ಮನ ವಿನಾ ಉಳಿದವರನ್ನು ಬಿಡುಗಡೆ ಮಾಡಿದರು. ಅವರಾರೂ ಗೌರಮ್ಮನನ್ನು ಬಿಟ್ಟು ಹೋಗಲಿಲ್ಲ. ಬಿಟ್ಟರೂ ಮರುದಿನ ಸಹಿ ಹಾಕಲು ಠಾಣೆಗೆ ಬಂದಾಗ ಗೌರಮ್ಮನನ್ನು ಬಂಧಿಸಿದರು. ಆಕೆಗಾಗಿ ಸತ್ಯಾಗ್ರಹ ಮಾಡಿದವರನ್ನು ಹೊಡೆದು ಹೊರ ಹಾಕಿದರು. ಗೌರಮ್ಮನನ್ನು ಹಿಂಸಿಸಿದರು. ಆಕೆ ಜೈಲಿನಲ್ಲೇ ಮಹದೇವಪ್ಪಗೌಡ ಎಮ್ಮೆ ಹಿಂತಿರುಗಿಸುವವರೆಗೆ ನಿರಶನ ವ್ರತ ಹಿಡಿದರು. ಇದೆಲ್ಲ ತಿಳಿದ ಗ್ರಾಮದ ಹೆಂಗಸರೆಲ್ಲ ಗೌಡನ ಮನೆಯೆದುರು ಧರಣಿ ಕೂತರು. ಆ ಹೆಂಗಸರಲ್ಲಿ ತನ್ನ ಮನೆಯ ಹೆಂಗಸರೂ ಸೇರಿರುವುದನ್ನು ಕಂಡ ಗೌಡ ನಡುಗಿಹೋದ. ಎಮ್ಮೆಯನ್ನು ಹಿಂತಿರುಗಿಸಿದ.

ಸತ್ಯಾಗ್ರಹ ನಿರತ ಮಹಿಳೆಯರಿಗೆ ಅನೇಕ ಸಮಸ್ಯೆಗಳಿದ್ದವು. ಆದರೆ ಇದು ತಮ್ಮ ಕರ್ತವ್ಯ ಎಂದು ಭಾವಿಸಿದ ಮಹಿಳೆಯರು ಹರಾಜು ನಡೆಯುವಾಗಲೇ ಪ್ರತಿಭಟಿಸುವ, ಕೊಂಡವರ ಮನೆಯ ಮುಂದೆ ಧರಣಿ ಹೂಡುವ, ಬಂಧಿತರಾಗುವ ಎಲ್ಲಕ್ಕೂ ಮಾನಸಿಕವಾಗಿ ಸಿದ್ಧರಾಗಿದ್ದರು. ಹೆಣ್ಣು ಮಕ್ಕಳಾದ್ದರಿಂದ ಅವರ ಮಾನ-ಘನತೆಗಳಿಗೆ ಕುಂದು ಬರುವ ಪ್ರಸಂಗಗಳೂ ಇದ್ದವು. ಅವರೆಲ್ಲ ಒಂದು ನಿರ್ಧಾರಕ್ಕೆ ಬರುತ್ತಾರೆ. ಪೊಲೀಸರ ಹೊಡೆತವನ್ನು ಸಹಿಸುವುದು, ದೈಹಿಕ ಹಿಂಸೆ, ಮಾನಭಂಗವೂ ಆಗಿಬಿಡುವುದಾದರೆ ತಮ್ಮ ಪಾತಿವ್ರತ್ಯ ಭಂಗದ ಸ್ಥಿತಿಯನ್ನು ಗಾಂಧೀಜಿಯವರಿಗೆ ಪತ್ರ ಬರೆದು ತಿಳಿಸಿ ಆತ್ಮಹತ್ಯೆ ಮಾಡಿಕೊಳ್ಳುವುದು. ಹೀಗೆ ವಚನಬದ್ಧರಾದವರು ಮಾತ್ರ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂಬ ತೀರ್ಮಾನ. ಇವು ಪೊಲೀಸರನ್ನೇ ಬೆಚ್ಚಿಸಿದ ಸಂಗತಿಗಳಾಗಿದ್ದವು.

ಪೊಲೀಸರ ದೌರ್ಜನ್ಯವೂ ಅತಿರೇಕದ ಪರಮಾವಧಿಯಾಗಿತ್ತು. ಅವರು ಸತ್ಯಾಗ್ರಹಿಗಳನ್ನು ಹೊರಹಾಕಿ ಅವರ ಮನೆಗಳಿಗೆ ಬೀಗ ಹಾಕುತ್ತಿದ್ದರು. ಆದರೆ ಇವರು ಬೀಗ ಒಡೆದು ಒಳಗೆ ಹೋಗುತ್ತಿದ್ದರು. ಅನ್ನದ ಪಾತ್ರೆ, ತೊಟ್ಟಿಲು, ಮಗು ಹೊರಗೆಸೆಯುವುದು, ಸ್ತ್ರೀಯರ ತೋಳು ಹಿಡಿದೆಳೆಯುವುದು, ಅಶ್ಲೀಲವಾದ ಬೈಗುಳಗಳು, ಅಸಭ್ಯ ವರ್ತನೆ.... ಇವೆಲ್ಲ ಕಾನೂನು ಬಾಹಿರವಾದರೂ ಪೊಲೀಸರು ಹಾಗೇ ಮಾಡುತ್ತಿದ್ದರು. ಇದನ್ನೆಲ್ಲ ಸಹಿಸಿ ಎದುರಿಸುತ್ತಿದ್ದ ದಿಟ್ಟೆಯರವರು.

ಆಗಸ್ಟ್ 14 ರಂದು ಹತ್ತಾರು ಮಂದಿ ಸ್ತ್ರೀಯರು ಬೀಗ ಹಾಕಿದ ಮನೆಯನ್ನು ಒಡೆದು ನುಗ್ಗಿದರು. ಪೊಲೀಸರು ಬಂದು ಹೊರ ಹಾಕಿದರು. ಮನುದೇವಿ ಎಂಬಾಕೆ ಮತ್ತೆ ಒಳಗೆ ನುಗ್ಗಿದಳು. ಮತ್ತೆ ಹೊರಗೆಳೆದರೂ ಆಕೆ ಜಗ್ಗಲಿಲ್ಲ. ತೋಳು ಹಿಡಿದೆಳೆದರು, ಕೂದಲು ಜಗ್ಗಿದರು, ಬೂಟುಗಾಲಿನಿಂದ ಒದ್ದರು, ಕೆನ್ನೆಗೆ ಪೆಟ್ಟುಕೊಟ್ಟರು. ಆಕೆಯ ಕಣ್ಣಿಗೆ ಖಾರದಪುಡಿ ಹಾಕಿ ಪ್ರಜ್ಞಾಹೀನಳಾದ ಆಕೆಯನ್ನು ಸಾಯುವಂಥ ಸ್ಥಿತಿಯಲ್ಲಿ ರಸ್ತೆಗೆಸೆದು ಹೋಗಿದ್ದರು. ಆಕೆ ಚಿಕಿತ್ಸೆ ಪಡೆದು ಮತ್ತೆ ಬೀಗ ಮುರಿಯಲು ಸಿದ್ಧಳಾದಳು !

ನವೆಂಬರ್ 22ಕ್ಕೆ ಕಾರವಾರಕ್ಕೆ ರಾಜ್ಯಪಾಲರು ಬರುವ ಕಾರ್ಯಕ್ರಮ. ಸತ್ಯಾಗ್ರಹಿಗಳು ಕಪ್ಪು ಬಾವುಟ ಪ್ರದರ್ಶನ ಮಾಡುವುದೆಂದು ತೀರ್ಮಾನವಾಗಿತ್ತು. ಆದರೆ ಎಲ್ಲರನ್ನೂ ಬಂಧಿಸಲಾಯಿತು.

ಬಂಧನದ ಸುದ್ದಿ ತಿಳಿದ ಕಣಗಿಲ ಬೊಮ್ಮ ಎಂಬ ಮಹಿಳೆ, ಇನ್ನೊಬ್ಬ ಸ್ವಯಂ ಸೇವಕನೊಂದಿಗೆ ಯೋಜನೆ ರೂಪಿಸಿದಳು. ಕಾಡಿನ ದಾರಿ ಹಿಡಿದು ಕಾರವಾರ ತಲುಪಿದಳು.

ರಾಜ್ಯಪಾಲರು ಹಡಗಿನಿಂದಿಳಿದು ನಡೆದಾಗ "ಗವರ್ನರರೆ, ಹಿಂದಿರುಗಿ ಹೋಗಿ" ಎಂದು ಕೂಗುತ್ತ ಕಪ್ಪು ಬಾವುಟ ತೋರಿಸಿದಳು. ಮರದ ಮೇಲೆ ಕಾದಿದ್ದ ಸ್ವಯಂ ಸೇವಕ ಕರಪತ್ರಗಳನ್ನು ತೂರಿದ. ಯೋಜನೆ ಹಾಗೆ ಕಾರ್ಯಗತವಾಗಿತ್ತು ಒಬ್ಬಳೇ ಮಹಿಳೆಯಿಂದ.

ಶಿರಸಿಯ ಸೀತಾಬಾಯಿ ಹನ್ನೆರಡು ಮಂದಿ ಸ್ತ್ರೀಯರೊಂದಿಗೆ ಪೊಲೀಸ್ ಠಾಣೆಗೇ ಬಂದಳು.

"ಯಾರು ನೀನು ? ಯಾಕೆ ಬಂದೆ ? "

"ಕಾನೂನು ಭಂಗ ಮಾಡಲು ಬಂದಿದ್ದೇನೆ"

"ಏನು ಹಾಗೆಂದರೆ ?" ಘರ್ಜಿಸಿದ್ದ ಅಧಿಕಾರಿ.

"ಬ್ರಿಟಿಷ್ ಕಾನೂನು ಸತ್ತಿದೆ. ಅದಕ್ಕೆ"

"ನಿನ್ನನ್ನು ಜೈಲಿಗೆ ಹಾಕ್ತೇವೆ"

"ನಾನದಕ್ಕೆ ಸಿದ್ಧವಾಗಿದ್ದೇನೆ" ಎನ್ನುತ್ತ ಆಕೆ ಬಾವುಟ ಎತ್ತಿ ಹಿಡಿದಳು.

ಅದನ್ನು ಕಿತ್ತೆಸೆಯಲು ಅಧಿಕಾರಿ ಮುಂದೆ ಬಂದಾಗ "ನನ್ನ ಮೈ ಕೈ ಮುಟ್ಟಿದರೆ ನಿಮ್ಮ ಕಾನೂನು ನೀನೇ ಮುರಿದಂತೆ. ನಿನ್ನ ಕಾನೂನಿನ ಚೌಕಟ್ಟಿನೊಳಗಿರು. ಇಲ್ಲವಾದರೆ ಅದು ಸತ್ತಿದೆ ಎಂದು ಒಪ್ಪಿಕೊ"

ಅವನು ತೆಪ್ಪಗಾಗಿ ಕೈಕೈ ಹಿಸುಕುತ್ತ ನಿಂತ !

ಚಳವಳಿಯ ಕಾವು ಹರಡದಿರಲಿ, ಪ್ರಚಾರ ಸಿಗದಿರಲಿ ಎಂತಲೇ ಬ್ರಿಟಿಷ್ ಸರ್ಕಾರ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿತು. ಆಗ ಕರಪತ್ರಗಳನ್ನು ಸಿದ್ಧಮಾಡಿ ಹಂಚುವ ಕ್ರಿಯೆ ಪ್ರಾರಂಭವಾಯಿತು. ಮನೆ, ಅಲ್ಲಿಗೂ ಪೊಲೀಸರ ಕಣ್ಣು ಬಿದ್ದಾಗ ದಟ್ಟ ಕಾಡಿನಲ್ಲಿ ಕೂಡ ಕರಪತ್ರಗಳು ಮುದ್ರಿತಗೊಂಡವು. ಹಂಚುವಲ್ಲಿ ಸ್ತ್ರೀಯರು ಮುಖ್ಯಪಾತ್ರ ವಹಿಸಿದರು. ನೆಂಟರ ಮನೆಗೆ ಹೋಗುವ ಹಾಗೆ ತಿಂಡಿ-ಊಟದ ಡಬ್ಬಗಳಲ್ಲೆಲ್ಲ ಕರಪತ್ರಗಳು. ಪೊಲೀಸರಿಗೆ ಇದನ್ನೆಲ್ಲ ಹಿಡಿಯುವುದು ಕಷ್ಟವಾಗುತ್ತಿತ್ತು.

ಭಾಗೀರಥಿಬಾಯಿ ಎಂಬ ಮಹಿಳೆಯ ಬಗ್ಗೆ ಗುಮಾನಿಯಿದ್ದ ಪೊಲೀಸರು ಆಕೆಯ ಮನೆಗೆ ನುಗ್ಗಿ ಹುಡುಕಾಡಿದರು. ಕರಪತ್ರ ಸಿಗಲಿಲ್ಲ. ಕಡೆಗೆ ಭಾಗೀರಥಿಬಾಯಿ ಕೂತಿದ್ದ ಸ್ಥಳ ಹುಡುಕಬೇಕೆಂದರು.

"ಮೂರು ದಿನ ಕಾಲ ನನ್ನನ್ನು ಸೋಕುವ ಹಾಗಿಲ್ಲ. ಮುಟ್ಟಾಗಿದೀನಿ, ಮೈಲಿಗೆ ಆಗುತ್ತೆ" ಅಂದರು ಆಕೆ. ಇವನ್ನೆಲ್ಲ ವಿರೋಧಿಸಿ, ಮುರಿದು ಏನಾದರೂ ಮಾಡಿದರೆ ಜನ ಸಿಟ್ಟಿಗೇಳುತ್ತಾರೆಂದು ಪೊಲೀಸರು ಹಾಗೇ ವಾಪಸಾದರು. ಭಾಗೀರಥಿಬಾಯಿ ಹಾಸಿಗೆಯ ಒಳಗೆ ಕರಪತ್ರಗಳನ್ನಿಟ್ಟು ಗುರುತೇ ಸಿಗದ ಹಾಗೆ ಹೊಲಿಯುವುದರಲ್ಲಿ ಸಿದ್ಧಹಸ್ತರು !

1942ರಲ್ಲಿ 'ಕ್ವಿಟ್ ಇಂಡಿಯಾ' ಚಳವಳಿ ಪ್ರಾರಂಭವಾಗಿತ್ತು. ನಾಯಕರನ್ನೆಲ್ಲ ಜೈಲಿನಲ್ಲಿಟ್ಟಿತ್ತು ಸರ್ಕಾರ. ಇನ್ನು ಕೆಲವರು ಭೂಗತರಾಗಿ ಚಳವಳಿಯನ್ನು ಸಕ್ರಿಯವಾಗಿಸಲು ನೆರವಾಗುತ್ತಿದ್ದರು. ಪೊಲೀಸ್ ಠಾಣೆಯನ್ನು ಸುಡುವುದು, ಸರಕಾರಿ ಕಛೇರಿಗಳ ಲೂಟಿ ಇತ್ಯಾದಿ ನಡೆದಿತ್ತು ಸತ್ಯಾಗ್ರಹಿಗಳಿಂದ. ಪೊಲೀಸರಿಗೆ ಬಿಡುವಿಲ್ಲದ ಕೆಲಸ. 1943ರ ಆಗಸ್ಟ್ 9ರಂದು ಸೌಂದತ್ತಿ, ಹೂಲಿ, ಉಗರಗೋಳ, ಹಿರೆಕಾಂಬಿ ಮೊದಲಾದ ಕಡೆಗಳಿಂದ ಬಂದ ಮಹಿಳೆಯರು, ಕರಿಕಟ್ಟೆ ಎಂಬಲ್ಲಿ ಸೇರಿದರು. ತ್ರಿವರ್ಣಧ್ವಜ ಹಿಡಿದು 'ಕ್ವಿಟ್ ಇಂಡಿಯಾ', 'ಗಾಂಧೀಜಿಯನ್ನು ಬಿಡುಗಡೆ ಮಾಡಿ', 'ಮಾಡುವೆವು ಇಲ್ಲ ಮಡಿಯುವೆವು' ಘೋಷಣೆಗಳನ್ನು ಕೂಗುತ್ತಿದ್ದ ಈ ಸ್ತ್ರೀಯರಿಗೆ ಜನತೆಯ ಭವ್ಯ ಸ್ವಾಗತವಿತ್ತು. ಮಧ್ಯಾಹ್ನ 12 ಗಂಟೆಗೆ ತಾಲ್ಲೂಕು ಕಛೇರಿಗೆ ನುಗ್ಗಿ ಕಡತ, ದಾಖಲೆಗಳನ್ನು ಧ್ವಂಸ ಮಾಡುತ್ತ "ಇದು ನಮ್ಮ ಸರಕಾರ ಅಲ್ಲ", "ಬ್ರಿಟಿಷರೇ ಹಿಂದಿರುಗಿ" ಅಂತ ಕೂಗತೊಡಗಿದರು. ಅಲ್ಲಿದ್ದ ಪೊಲೀಸರು ಹೆದರಿ ಓಡಿದ್ದರು. ಮತ್ತಷ್ಟು ಪೊಲೀಸರೊಂದಿಗೆ ಹಿಂತಿರುಗಿದಾಗ ಜನ ಸತ್ಯಾಗ್ರಹಿಗಳಿಗೆ ಹಾರ ಹಾಕಿ ಗೌರವಿಸುತ್ತಿದ್ದರಂತೆ ! ಅನಂತರ ಹಲವರನ್ನು ಬಂಧಿಸಲಾಯಿತು.

ಸಂಪಗಾಂವದ ಬಳಿ ಇರುವ ನಾಗನೂರು ಎಂಬ ಗ್ರಾಮದಲ್ಲಿ ಉಪ್ಪಿನ ಸತ್ಯಾಗ್ರಹ ಸಮಯ. ಪ್ರಭಾತ್ ಫೇರಿ, ಭಾಷಣ, ಪಿಕೆಟಿಂಗ್, ರಾಷ್ಟ್ರಪ್ರೇಮದ ಹಾಡುಗಳ ಗಾಯನ ಇತ್ಯಾದಿ ಭಾರೀ ಬಿರುಸಿನ ಚಳುವಳಿ ಇತ್ತು. ಕರೆ ನಿರಾಕರಣದಲ್ಲಂತೂ ಇಡೀ ಹಳ್ಳಿ ಒಂದಾಗಿ ಭಾಗಿ ಆಗಿತ್ತು. ಇವನ್ನೆಲ್ಲ ಹತ್ತಿಕ್ಕಲು ಬೆಳಗಾವಿ ಜಿಲ್ಲೆಯ ದಕ್ಷಿಣ ವಿಭಾಗದ ಮ್ಯಾಜಿಸ್ಟ್ರೇಟ್ ವೇಲ್ಸ್ ಎನ್ನುವವರು ಪೊಲೀಸ್ ಸಿಬ್ಬಂದಿಯೊಡನೆ ಬಂದರು. ಇಡೀ ಗ್ರಾಮವನ್ನೇ ಸುತ್ತುವರಿದರು. ಎಲ್ಲರನ್ನೂ ಬಂಧಿಸಲಾರಂಭಿಸಿದರು. ಆ ಸಮಯದಲ್ಲಿ ಬಂಧಿತರಾಗಿದ್ದ ಸತ್ಯಾಗ್ರಹಿ ಅಬ್ಬಯ್ಯಸ್ವಾಮಿ ಮನೆಯ ಮುಂದೆ ಗಾಂಧೀಜಿಯವರ ಭಾವಚಿತ್ರ ಕಂಡಿತು. ಅದನ್ನು ಗೋಡೆಗೆ ಅಪ್ಪಳಿಸಿ, ಹರಿದು, 'ಸುಟ್ಟುಬಿಡಿ' ಅಂತಲೂ ಆಜ್ಞೆ ಮಾಡಿದರು. ಇದನ್ನೆಲ್ಲ ನಾಗವ್ವ ಎಂಬಾಕೆ ಗಮನಿಸುತ್ತಲೇ ಇದ್ದಳು.

ಸತ್ಯಾಗ್ರಹಿಗಳನ್ನೆಲ್ಲ ಬಂಧಿಸಿ ವ್ಯಾನಿಗೆ ಕರೆದೊಯ್ಯುತ್ತಿದ್ದಾಗ ಊರಿನ ಜನರೆಲ್ಲ 'ನಾವೂ ಸತ್ಯಾಗ್ರಹಿಗಳು, ನಮ್ಮನ್ನೂ ಬಂಧಿಸಿ' ಎನ್ನುತ್ತ ಹಿಂಬಾಲಿಸಿದರು. ಸಮೀಪಿಸಿದಾಗ ಗುಂಪಿನಲ್ಲಿದ್ದ ನಾಗವ್ವ ತನ್ನ ಚಪ್ಪಲಿಗಳನ್ನು ಕಳಚಿಕೊಂಡು ವೇಲ್ಸರ ಕೆನ್ನೆಗೆ ಬಾರಿಸಿದಳು.

ವೇಲ್ಸರು ಆ ಚಪ್ಪಲಿ ಕಿತ್ತು ಬ್ಯಾಗಿಗೆ ಹಾಕಿಕೊಂಡರು.... ಆಕೆ ಹೊಡೆದ ಕಾರಣ ಅವರಿಗೆ ತಿಳಿದಿದ್ದು ಅನಂತರವೇ !

ಎಲ್ಲ ನೆಲೆಯಿಂದಲೂ ನಿರಂತರವಾಗಿ ಜನಸಾಮಾನ್ಯರಿಂದ ಎದ್ದು ಬಂದ ಸ್ತ್ರೀಯರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಅವರೆಲ್ಲರ ಬಲಿದಾನದ ನಂತರ ಸಿಕ್ಕ ಸ್ವಾತಂತ್ರ್ಯ ಎಷ್ಟು ಕನಸುಗಳನ್ನು ಸಾಕಾರಗೊಳಿಸಿದೆ ? ಈ ಐವತ್ತರ ಹೊತ್ತಿಗೆ ಯಾರು ಅನುಭವಿಸಿದರು ಸ್ವಾತಂತ್ರ್ಯ ಭಾರತದ ಸವಿಯ ?

ಮಹಿಳೆಯರ ಮೇಲಿನ ಅತ್ಯಾಚಾರ. ಸಾಮೂಹಿಕ ಅತ್ಯಾಚಾರ, ವೇಶ್ಯಾಸಮಸ್ಯೆ, ಬಾಲಕಿಯರನ್ನು ವೇಶ್ಯಾವೃತ್ತಿಗಿಳಿಸುವುದು, ಅವರ ಹಕ್ಕುಗಳನ್ನು ಉಲ್ಲಂಘಿಸುವುದು, ವೃತ್ತಿಯಲ್ಲಿ ಅಸಮಾನತೆ, ವೇತನದಲ್ಲಿ ತರತಮ ಭೇದ, ಹೆಣ್ಣು ಶಿಶುವಿನ ಹತ್ಯೆ, ನ್ಯಾಯಾಂಗದಲ್ಲಿ ಕೂಡ ತಪ್ಪಿತಸ್ಥನಿಗೆ ಕಡಿಮೆ ಶಿಕ್ಷೆ. ಹೀಗೆ ಪಟ್ಟಿ ಮಾಡುತ್ತಾ ಹೊರಟರೆ ನಿಲುಗಡೆಯೇ ಇರದು. ಆ ಎಲ್ಲ ಸ್ತ್ರೀಯರೂ ಬಲಿದಾನ ಮಾಡಿ ತಂದುಕೊಟ್ಟ ಸ್ವಾತಂತ್ರ್ಯ ಇದೇ ಏನು ?

ಯಾರು ಮಾಡಬೇಕು ಈ ಆತ್ಮಾವಲೋಕನ ?

********

# ‘ಪದ್ಯ ಬರೆಯುವುದರ ಪ್ರತಿಫಲ ಅಪಾಯವಾದರೆ ಅದರೊಂದಿಗೇ ಬದುಕಬೇಕಾಗುತ್ತದೆ’

- ಶಹಜಹಾನ

ಶಹಜಹಾನ ಒಬ್ಬ ಯುವ ಲೇಖಕಿ. ಈಕೆ ಮುಸ್ಲಿಂ ಮಹಿಳೆಯಾಗಿ ತೆಲುಗು ಭಾಷೆಯಲ್ಲಿ ಬರೆಯುತ್ತಿರುವುದೇ ಈಕೆಯ ವಿಶೇಷ. ಈಕೆ ಬೆಳೆದದ್ದು ತೆಲುಗು ಸಾಹಿತ್ಯದ ಸಾಂಸ್ಕೃತಿಕ ಹಿಂದೂ ವಾತಾವರಣದಲ್ಲಿ. ಹಾಗಾಗಿ ಈಕೆಯ ಮುಸ್ಲಿಂ ಅಸ್ತಿತ್ವ ನಾಶವಾಗುವಂತಹ ಒತ್ತಡವಿತ್ತು. ಬಾಬರಿ ಮಸೀದಿಯನ್ನು ಕೆಡವಿದಾಗಿನಿಂದ ಈಕೆಯ ಅಲ್ಪ ಸಂಖ್ಯಾತರ ಸಮುದಾಯದ ಒಳಗಡೆಯಲ್ಲಿ ಆತಂಕ, ಒತ್ತಡ ಎರಡೂ ಇತ್ತು. ಮುಸ್ಲಿಂ ಸಮುದಾಯದ ಒಳಗಿನ ಮಹಿಳೆಯರ ಶೋಷಣೆಯ ಬಗ್ಗೆ ಈಕೆ ವಿಮರ್ಶಾತ್ಮಕವಾಗಿ ಬರೆಯುತ್ತಾರೆ. ಯುವ ಮುಸ್ಲಿಂ ಬರಹಗಾರ್ತಿಯರ ಧ್ವನಿಯಾಗಿರುವ ಈಕೆ ಹಿಂದೂಗಳೇ ಪ್ರಭಾವ ಹೊಂದಿರುವ ಸಾಹಿತ್ಯದ ವಾತಾವರಣದಲ್ಲಿ ತಮ್ಮದೇ ಆದ ಅಸ್ತಿತ್ವ ಹಾಗೂ ಭಿನ್ನತೆ ಹೊಂದಿದ್ದಾರೆ. 2000 ವರ್ಷದ ಇವರ ಅತ್ಯುತ್ತಮ ಕಥೆಗೆ ರಂಗವಲ್ಲಿ ಮೆಮೋರಿಯಲ್ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಈಕೆ ಹುಟ್ಟಿದ್ದು ಕಮಾಮ್ ಜಿಲ್ಲೆಯ ಪೋಕ್‌ಟ್ಯಾರಮ್ ಹಳ್ಳಿಯಲ್ಲ. ಓದಿದ್ದು ಕೊಥಾಗುಡುಮ್‌ನಲ್ಲಿ. ಕಮಾಮ್ ತೆಲಂಗಾಣಕ್ಕೆ ಸೇರಿದ್ದಾಗ್ಯೂ ಕೂಡಾ ಇಲ್ಲಿ ಆಂಧ್ರದ ಪ್ರಭಾವ ಹೆಚ್ಚು. ಈ ಜಿಲ್ಲೆಯ ಮುಸ್ಲಿಂರು ತೆಲುಗು ಮಾತನಾಡುವುದಷ್ಟೇ ಅಲ್ಲ, ಓದಬಲ್ಲರು ಹಾಗೂ ಬರೆಯಬಲ್ಲರು. ಕೆಲವು ಸಲ ಇವರ ತೆಲುಗು ಹಿಂದೂಗಳ ತೆಲುಗಿಗಿಂತ ಉತ್ತಮವಾಗಿರುತ್ತದೆ. ಈಕೆಯ ಅಜ್ಜ ನಿಜಾಮುದ್ದೀನ್ ರಾಮಾಯಣ ಹಾಗೂ ಮಹಾಭಾರತವನ್ನು ಸಂಪೂರ್ಣವಾಗಿ ಸಂಶೋಧಿಸಿ, ಅಧ್ಯಯನ ನಡೆಸಿದ್ದರು. ಹಳ್ಳಿಯ ಜನರಿಗೆ ಇವುಗಳನ್ನು ಅವರು ಓದಿ ಹೇಳುತ್ತಿದ್ದರು. ಜನರೂ ಕೂಡಾ ತುಂಬಾ ಆಸಕ್ತಿಯಿಂದ ಕೇಳುತ್ತಿದ್ದರು, ಏಕೆಂದರೆ ಈಕೆಯ ಅಜ್ಜ ಸ್ಪಷ್ಟವಾಗಿ ವಿವರಿಸುತ್ತಿದ್ದರು.

ಈಕೆಯ ಅಜ್ಜನಿಗೆ ನೂರಾರು ಎಕರೆ ಭೂಮಿ ಇತ್ತು. ಆದರೆ ಧಾನಧರ್ಮಕ್ಕೆ ಹಾಗೂ ಇತರ ಚಟುವಟಿಕೆಗಳಿಗೆ ಇವರು ಎಲ್ಲವನ್ನು ವ್ಯಯಿಸಿದ್ದರು. ಶಹಜಹಾನಳ ತಂದೆಗೆ ಒಂದು ಎಕರೆ ಭೂಮಿ ಮಾತ್ರ ಉಳಿದಿತ್ತು. ಆ ಭೂಮಿಯಲ್ಲಿ ಕೆಲಸ ಮಾಡುತ್ತಲೇ ಆತ ಓದಿದ್ದರು. - S.S.L.C ಪರೀಕ್ಷೆ ಕಟ್ಟುವುದಕ್ಕೆ ಅವರ ಬಳಿ ಹಣ ಇರಲಿಲ್ಲ. ಈಕೆಯ ಅಜ್ಜ ಈ ಪರೀಕ್ಷೆ ಬರೆಯುವ ಅಗತ್ಯವೇ ಇಲ್ಲ ಎಂದಿದ್ದರು. ಈಕೆಯ ತಂದೆಗೆ ಹೊಡದೇ ಬಿಟ್ಟಿದ್ದರು. ಈಕೆಯ ಅಜ್ಜಿ ಆಕೆಯ ಮೂಗುತಿ ಮಾರಿ ಫೀಸ್ ಕೊಟ್ಟಿದ್ದರು. ಕೆಲಸ ಮಾಡುತ್ತಲೇ ಈಕೆಯ ತಂದೆ ಎಂ.ಎ.ಮುಗಿಸಿ, ಉಪನ್ಯಾಸಕರಾದರು.

ಚಿಕ್ಕವಯಸ್ಸಿನಿಂದಲೇ ಶಹಜಹಾನಳ ತಂದೆ ತೆಲುಗು ಭಾಷೆಯಲ್ಲಿ ಪದ್ಯ ಬರೆಯುತ್ತಿದ್ದರು. ‘ಭಾರತಿ’ ಯಲ್ಲಿ ಇವರ ಪದ್ಯಗಳು ಕ್ರಮವಾಗಿ ಪ್ರಕಟವಾಗುತ್ತಿದ್ದವು. ಇವರ ಕಾದಂಬರಿ ಕೂಡಾ ‘ಭಾರತಿ’ ಯಲ್ಲಿಯೇ ಪ್ರಕಟಗೊಂಡಿತ್ತು. ಅವರು ಕೆಲವು ಕವನ ಸಂಕಲನಗಳನ್ನು ಪ್ರಕಟಿಸಿದ್ದರು. ಕಮಾಮ್‌ನ ಪ್ರಗತಿಪರ ಲೇಖಕರೊಂದಿಗೆ ಇವರಿಗೆ ನಿಕಟ ಸಂಪರ್ಕವಿತ್ತು.

ಶಹಜಹಾನರ ತಂದೆ ಬರೆಯುತ್ತಿದ್ದುದು ಮಾತ್ರವಲ್ಲ, ಅವರು ಅನೇಕ ಪತ್ರಿಕೆಗಳಿಗೆ ಚಂದಾದಾರರಾಗಿದ್ದರು. ಅನೇಕ ಪುಸ್ತಕಗಳನ್ನು ಮನೆಗೆ ತರುತ್ತಿದ್ದರು. ಹಿಂದೂ-ಮುಸ್ಲಿಂ ಬರಹಗಾರರು, ಕವಿಗಳು ಇವರ ಮನೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು. ಹೀಗಾಗಿ ಚಿಕ್ಕವಯಸ್ಸಿನಲ್ಲಿಯೇ ಶಹಜಹಾನಳಿಗೆ ಸಾಹಿತ್ಯದ ಬಗ್ಗೆ ಒಲವು ಮೂಡಿತ್ತು.

ಈಕೆಯ ತಂದೆಯ ಗೆಳೆಯರಲ್ಲೊಬ್ಬರಾದ ನೆಲಕೊಂಡಪಲ್ಲಿಯ ಪಂಡಿತ್ ಫಾನ್ ಡಿ ಕೋಟಾ ಲಕ್ಷ್ಮೀನಾರಾಯಣ್ ಬಹಳ ಸಂಪ್ರದಾಯವಾದಿಗಳಾಗಿದ್ದರು. ಅವರು ಯಾರನ್ನೂ ಮುಟ್ಟುತ್ತಿರಲಿಲ್ಲ. ಬಟ್ಟೆಯ ಕುರ್ಚಿಯಲ್ಲಿ ಕೂಡಾ ಅವರು ಕೂರುತ್ತಿರಲಿಲ್ಲ. ಆಗೆಲ್ಲ ಶಹಜನಾಳಿಗೆ ಆಶ್ಚರ್ಯವಾಗುತ್ತಿತ್ತು. ಅವರ ನಂಬಿಕೆ ಆ ರೀತಿಯದು ಎಂದು ಅಂದುಕೊಂಡಿದ್ದುಂಟು. ಆದರೆ ಅವರ ಸಾಹಿತ್ಯದ ಚರ್ಚೆಗಳು ಪ್ರಬುದ್ಧವಾಗಿರುತ್ತಿದ್ದವು. ಶಹಜಹಾನಳ ಮನೆಯಲ್ಲಿ ಎಲ್ಲರೂ ಅವರ ಚರ್ಚೆಗಳನ್ನು ಆನಂದಿಸುತ್ತಿದ್ದರು. ಈಕೆಯ ತಂದೆಗೆ ಬೇರೆಡೆಗೆ ವರ್ಗವಾದಾಗ ಅವರು ಈಕೆಯ ತಂದೆಯನ್ನು ಅಪ್ಪಿಕೊಂಡಿದ್ದರು. ಆತ ತಂದೆಯ ಸ್ನೇಹವನ್ನು ಮೌಲ್ಯಯುತ ಎಂದು ಬಗೆದಿದ್ದರು. ಆತನ ಮಕ್ಕಳು ಶಹಜಹಾನಳ ಮನೆಯಲ್ಲಿ ತಿನ್ನುತ್ತಿದ್ದರು.

ಬಾಲ್ಯದಿಂದಲೂ ಶಹಜಹಾನಳು ಬಹಳ ಓದುತ್ತಿದ್ದರು. ಬರೀ ಆಕೆ ತಂದೆ ಬರೆದುದನ್ನು ಮಾತ್ರವಲ್ಲ, ಬೇರೆ ಪತ್ರಿಕೆಗಳನ್ನು ಕೂಡಾ. ಈಕೆ ಪದ್ಯ ಓದುವುದನ್ನು ಇಷ್ಟ ಪಡುತ್ತಿದ್ದರು. ಈಕೆಗೆ 12 ವರ್ಷವಿರುವಾಗ ವೋಲ್ಗಾರ ‘ಸಹಜ ಮತ್ತು ಸ್ವೇಚ್ಛಾ’ ಓದಿದ್ದುಂಟು. ಹೊಸ ವಿಚಾರಗಳೊಂದಿಗೇ ಈಕೆ ಬೆಳೆದರು.

ಟಾಲ್‌ಸ್ಟಾಯ್‌ನ ಕಥೆಗಳನ್ನು ಹಾಗೂ ಚಲಂ ಪ್ರೀತಿ ಪತ್ರಗಳನ್ನೂ ಸಹ ಈಕೆ ಹನ್ನೆರೆಡು ವರ್ಷದಲ್ಲಿಯೇ ಓದಿದ್ದರು. ಕ್ರಮೇಣ ಕಣ್ಣಿಗೆ ಕಾಣುವ ಪುಸ್ತಕಗಳನ್ನೆಲ್ಲ ಈಕೆ ಓದತೊಡಗಿದ್ದರು. 1994 ರಲ್ಲಿ ಪಲವಂಚದಲ್ಲಿ ಓಲ್ಗಾ, ಚೂರಿ ರಾವ್ ರಾವ್, ಶಿವ ರೆಡ್ಡಿ ಮುಂತಾದ ಸಾಹಿತಿಗಳು ಮಾತನಾಡಿದ್ದ ಸಭೆಗೆ ಶಹಜಹಾನ ಹೋಗಿದ್ದರು-ಆಕೆಗೆ ಅಲ್ಲಿ ನಿಜವಾದ ಸ್ಫೂರ್ತಿ ಸಿಕ್ಕಿತ್ತು.

ಶಹಜಹಾನಳ ಬಾಲ್ಯದಲ್ಲಿ ಈಕೆಯ ತಂದೆ ರಾಮಾಯಣ ಮತ್ತು ಮಹಾಭಾರತ ಕಥೆ ಹೇಳುತ್ತಿದ್ದರು. ಕುರಾನ್ ಕಥೆಗಳನ್ನು ಹೇಳುತ್ತಿದ್ದುದು ಕಡಿಮೆ. ಅವರಿಗೆ ಉರ್ದು ಗೊತ್ತಿತ್ತು. ಕುರಾನ್ ಓದಿದ್ದರು. ಆದರೆ ಕುರಾನ್‌ನ್ನು ಮಕ್ಕಳಿಗೆ ಹೇಳಿಕೊಟ್ಟರಲಿಲ್ಲ. ಏಕೆಂದರೆ ಅವರು ಓದಿದ್ದು ತೆಲುಗು ಸಾಹಿತ್ಯವನ್ನು. ತೆಲುಗು ಭಾಷೆಯ ಮೇಲೆ ಅವರಿಗೆ ಪ್ರಭುತ್ವವಿತ್ತು. ಹಿಂದೂ ಪುರಾಣದ ಕಥೆಗಳನ್ನು ಮಕ್ಕಳು ಬಲ್ಲವರಾಗಿದ್ದರು, ಕುರಾನಿನ ಕಥೆಗಳನ್ನಲ್ಲ. ಇವರು ಹಿಂದೂ ಹಾಗೂ ಮುಸ್ಲಿಂ ಎರೆಡೂ ಹಬ್ಬಗಳನ್ನು ಆಚರಿಸುತ್ತಿದ್ದರು. 10ನೆಯ ತರಗತಿಯವರೆಗೆ ಶಹಜಹಾನಳಿಗೆ ಮುಸ್ಲಿಂ ಗೆಳತಿಯರೇ ಇರಲಿಲ್ಲ. 10ನೆಯ ತರಗತಿಯಲ್ಲಿ ಒಬ್ಬಳಿದ್ದಳು. ಶಾಲೆಯಲ್ಲಿದ್ದ ಮುಸ್ಲಿಂ ಗೆಳತಿಯರು ಬುರ್ಖಾ ಧರಿಸುತ್ತಿದ್ದರು. ಆದರೆ ಈಕೆಗೆ ಅದು ಇಷ್ಟವಾಗುತ್ತಿರಲಿಲ್ಲ. ಹಾಗಾಗಿ ಅವರು ಈಕೆಯನ್ನು ಭಿನ್ನವಾಗಿ ಕಾಣುತ್ತಿದ್ದರು. ಈಕೆಗೆ ಹಿಂದೂ ಹುಡುಗಿಯರೇ ಬಹಳ ಜನ ಗೆಳತಿಯರಿದ್ದರು. ಈಕೆಯ ತಂದೆ ನಮಾಜ್ ಓದುವುದನ್ನು ಈಕೆಗೆ ಕಲಿಸಿದ್ದರು. ಈಕೆ ದೇವರನ್ನು ನಂಬದಿದ್ದಾಗ್ಯೂ ಕೂಡಾ ಪಕ್ಕದ ಮನೆಯ ಹಲವು ಹಬ್ಬಗಳಲ್ಲಿ ನಮಾಜ್ ಮಾಡುತ್ತಿದ್ದಳು. ಈಕೆಯ ಅಕ್ಕನಿಗೆ ಕೂಡಾ ದೇವರಲ್ಲಿ ನಂಬಿಕೆ ಇರಲಿಲ್ಲ. ಈಕೆಯ ಅಣ್ಣ ತುಂಬಾ ಧಾರ್ಮಿಕ ವ್ಯಕ್ತಿ. ಆತ ನಿತ್ಯ ನಮಾಜ್ ಮಾಡುತ್ತಿದ್ದ. ಈಕೆಯ ತಂದೆ ಹಬ್ಬಗಳಲ್ಲಿ ಮಾತ್ರ ನಮಾಜ್ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಈಕೆ ಹಿಂದೂ ಗೆಳತಿಯರಿಂದ ಬಿಂದಿಗಳನ್ನು ಇಸಿದು ಇಟ್ಟುಕೊಳ್ಳುತ್ತಿದ್ದಳು. ಇದನ್ನು ನೋಡಿದರೆ ಮುಸ್ಲಿಂ ಹುಡುಗಿಯರಿಗೆ ಸಿಟ್ಟು ಬರುತ್ತಿತ್ತು. ಅವರು ಶಹಜಹಾನಳ ಜೊತೆ ಮಾತನಾಡುವುದನ್ನೇ ಬಿಟ್ಟು ಬಿಡುತ್ತಿದ್ದರು. ಈಕೆಗೆ ಬುರ್ಖಾ, ಅಥವಾ ಇತರ ಹವ್ಯಾಸಗಳನ್ನು ಕಂಡರೇ ಆಗುತ್ತಿರಲಿಲ್ಲ. ಹಾಗಾಗಿ ಈಕೆ ಹಿಂದೂ ಹುಡುಗಿಯರ ಜೊತೆಗೆಯೇ ಹೆಚ್ಚು ಸ್ನೇಹದಿಂದ ಇರುತ್ತಿದ್ದಳು. ಇದರಿಂದಾಗಿ ಮುಸ್ಲಿಂ ಹುಡುಗಿಯರಿಗೆ ಇನ್ನೂ ಕೋಪ ಬರುತ್ತಿತ್ತು.

ಈಕೆ ಮೊದಲ ಪದ್ಯ ಬರೆದುದು ಹತ್ತನೆಯ ತರಗತಿಯಲ್ಲಿ. ಅದು ಕುಡಿತದ ವಿರುದ್ಧ. ಆನಂತರ ಈಕೆಯನ್ನು ಈಕೆಯ ತಂದೆ-ತಾಯಿ ಚಿಕ್ಕಪ್ಪನ ಮನೆಗೆ ಕಳಿಸಿದರು. ಅವರು ಏಕೆ ಹಾಗೆ ಕಳಿಸಿದರೆಂದು ಆಕೆಯ ಮುಗ್ಧ ಮನಸ್ಸಿಗೆ ಆಗ ಅರ್ಥವಾಗಿರಲಿಲ್ಲ. ಆಕೆಗೆ ಒಂಟಿ ಎನಿಸಿ ಆಕೆ ಪದ್ಯ ಬರೆದಿದ್ದಳು. ಈ ಪದ್ಯ 'ಭಾರತಿ'ಯಲ್ಲಿ ಪ್ರಕಟವಾಗಬೇಕಿತ್ತು. ಆದರೆ ಅಷ್ಟರಲ್ಲಿ ಅದು ಮುಚ್ಚಿ ಹೋಯಿತು. ಶಹಜಹಾನ ಪಲಾವಂಚ ರೇಡಿಯೋಗೆ ಪದ್ಯ ಬರೆಯತೊಡಗಿದಳು.ಅದರಿಂದ ಆಕೆ ಹಣ ಕೂಡಾ ಗಳಿಸುವಂತಾಯಿತು. ರೇಡಿಯೋ ಹವ್ಯಾಸಿಗಳಿಗೆ ಅತ್ಯುತ್ತಮ ಕಾವ್ಯವೇನೂ ಬೇಕಾಗಿರಲಿಲ್ಲ. ಈಕೆ ಸಾಮಾನ್ಯರಿಗೆ ತಲುಪುವ ರೀತಿ ಪದ್ಯ ಬರೆಯುತ್ತಿದ್ದರು. ಶಹಾಜಹಾನರ 'ಚೈತನ್ಯವ್' ಆಂಧ್ರಭೂಮಿಯಲ್ಲಿ ಪ್ರಕಟವಾದಾಗ ಈಕೆ ಕವಿಯಿತ್ರಿಯಾಗಿ ಗುರುತಿಸಲ್ಪಟ್ಟರು. ರೋಥಗುದ್‌ಡಮ್‌ನಲ್ಲಿ ಪದವಿ ಓದುವಾಗ ಈಕೆ ಅನೇಕ ಕವನ ಬರೆದರು. ಹಣದ ಸಮಸ್ಯೆಯಿಂದಾಗಿ ಈಕೆಗೆ ಪೋಸ್ಟ್ ಗ್ರ್ಯಾಜುಯೇಶನ್ ಮಾಡಲಾಗಲಿಲ್ಲ.

ಶಹಜಹಾನ ವೈಯಕ್ತಿಕವಾಗಿ ಬಹಳ ನೋವನ್ನು ಅನುಭವಿಸಿದ್ದಾರೆ. ಒಮ್ಮೆ ಕಾಲೇಜಿಗೆ ಹೋಗುವ ಸಮಯದಲ್ಲಿ ಈಕೆಯೊಡನೆ ಯಾರೋ ಮಾತನಾಡಿದ್ದರು. ಆಕೆ ನಗುವಿನಿಂದ ಉತ್ತರಿಸಿದ್ದಳು ಮಾತ್ರ. ಈ ಬಗ್ಗೆ ದೊಡ್ಡ ಗಲಾಟೆಯೇ ಆಗಿ ಹೋಗಿತ್ತು. ಆಕೆಯ ಮನೆಯಲ್ಲಿ ಅಲ್ಲದಿದ್ದರೂ ಆಕೆಯ ಬಂಧುಗಳು ಆತ ಯಾರು ? ಏನು ? ಎತ್ತ ? ಆತನೊಡನೆ ಯಾಕೆ ಮಾತನಾಡಿದಿ ? ಇತ್ಯಾದಿ ಶಹಜಹಾನಳಿಗೆ ತುಂಬಾ ಬೇಸರವಾಗಿತ್ತು. ತಾನೇನು ಅಪರಾಧ ಮಾಡದಿದ್ದರೂ ಯಾಕೆ ಹೀಗೆ ಮಾಡುತ್ತಾರೆ ಎಂಬ ಚಿಂತೆ ಆವರಿಸಿಕೊಂಡು ಆ ದುಗುಡದಲ್ಲಿ ನೋವು, ನಾಚಿಕೆ ಎಲ್ಲ ತುಂಬಿಕೊಂಡಿತ್ತು.

ಹುಡುಗಿಯರನ್ನು ಸಮಾಜ ಕಣ್ಣಿಟ್ಟು ಕಾಯುತ್ತದೆ. ಮುಸ್ಲಿಂ ಹುಡುಗಿಯರನ್ನು ಕಪ್ಪು ಲೇಯರ್‌ಗಳಿಂದ ಗೋಡೆ ಕಟ್ಟಿ ಪಕ್ಕದಲ್ಲಿರುವವರನ್ನು ನೋಡದಂತೆ ತಡೆಯಲಾಗುತ್ತದೆ. ಏಕೆ ಈ ರೀತಿಯ ಭಯದ ಬದುಕನ್ನು ಬದುಕಬೇಕೆಂಬುದು ತಮಗೆ ಅರ್ಥವಾಗುವುದಿಲ್ಲ ಎಂದು ಶಹಜಹಾನ ನುಡಿಯುತ್ತಾರೆ. ಭಯದಿಂದಲೇ ಬೆಳೆಯುತ್ತಾ ನಾವು ವಿಧೇಯ ತಂಗಿಯರು, ಮಕ್ಕಳಾಗುತ್ತೇವೆ. ನಂತರ ಇನ್ನೂ ವಿಧೇಯ ಪತ್ನಿಯರಾಗುತ್ತೇವೆ. ಎನ್ನುವ ಲೇಖಕಿ ಮುಸ್ಲಿಂ ಮಹಿಳೆಯರು ಭಯ, ಅಭದ್ರತೆ, ಯಾವಾಗ ತಲಾಖ್ ಹೇಳಲಾಗುತ್ತದೋ ಎಂಬ ಆತಂಕದಲ್ಲಿ ಬದುಕುತ್ತಾರೆ ಎನ್ನುತ್ತಾರೆ. ಯಾಕೆ ಆತ ಹಾಗೆ ಮಾಡುತ್ತಾನೆಂಬುದೂ ಕೂಡಾ ಅವರಿಗೆ ತಿಳಿದಿರುವುದಿಲ್ಲ. ಸ್ವತಂತ್ರ್ಯವಿರದ ಬದುಕನ್ನು ಪ್ರಶ್ನಿಸಬೇಕೆನ್ನುವ ಹಿನ್ನೆಲೆಯಲ್ಲಿ ತಾವು ಪದ್ಯ ಬರೆಯುತ್ತೇವೆ ಎಂದು ಲೇಖಕಿ ನುಡಿಯುತ್ತಾರೆ.

ಬಾಲ್ಯದಲ್ಲಿ ಮುಸ್ಲಿಂ ಆಗಿ ಗುರುತಿಸಿಕೊಳ್ಳದ ಶಹಜಹಾನ್ ಇಂದು ಮುಸ್ಲಿಂ ಕವಯಿತ್ರಿಯಾಗಿಯೇ ಗುರುತಿಸಲ್ಪಟ್ಟಿದ್ದಾರೆ. ತೆಲುಗು ಸಾಹಿತ್ಯದಲ್ಲಿ ಸ್ತ್ರೀವಾದಿ ಸಾಹಿತ್ಯ, ದಲಿತ ಸಾಹಿತ್ಯ ಕಾಣಿಸಿಕೊಂಡ ಮೇಲೆ ಅಲ್ಪಸಂಖ್ಯಾತರ ಸಾಹಿತ್ಯದ ಬರಹಗಳು ಕಾಣಿಸಿಕೊಂಡಿವೆ. ಶಹಜಹಾನ ಇದೆಲ್ಲದರಿಂದ ಪ್ರಭಾವಿತರಾಗಿದ್ದಾರೆ. ಸ್ತ್ರೀವಾದಿ ಸಾಹಿತ್ಯ ಹಾಗೂ ಫಿಲಾಸಫಿ ಓದಿದ ಮೇಲೆ ಎಲ್ಲಾ ಮಹಿಳೆಯರಂತೆ ಮುಸ್ಲಿಂ ಮಹಿಳೆಯರಿಗೂ ಸಮಸ್ಯೆಗಳು ಇವೆ ಎಂದು ಶಹಜಹಾನಳಿಗೆ ಅನ್ನಿಸತೊಡಗಿತ್ತು. ಯಾಕೆ ಈ ಬಗ್ಗೆ ಯಾರೂ ಬರೆಯುವುದಿಲ್ಲವೆಂದೂ ಆಶ್ಚರ್ಯವಾಗಿತ್ತು. ತಂತಿಯ ಬೇಲಿಯೊಳಗೆ ಬಂಧಿಸಲ್ಪಟ್ಟರೆ ರೋಮ್ಯಾಂಟಿಕ್ ಅಥವಾ ಪ್ರೀತಿಯ ಬಗ್ಗೆ ಹೇಗೆ ಕಾವ್ಯ ಬರೆಯಲು ಸಾಧ್ಯ ? ಕಾವ್ಯ ಬರೆಯಲೂ ಸ್ವಾತಂತ್ರ್ಯ ಬೇಡವೇ ಎಂದು ಕವಯಿತ್ರಿ ಪ್ರಶ್ನಿಸುತ್ತಾರೆ.

ಶಹಜಹಾನ ಈಕೆಯ ಪದ್ಯ 'ಕಬರ್ ದಾರ್' ನ್ನು ಪಲವಂಚಾದ ತ್ರಿಪುರಸೇಸಿ ಶ್ರೀನಿವಾಸರವರ ಮೆಮೋರಿಯಲ್ ಸಭೆಯಲ್ಲಿ ಓದಿದ್ದರು. ಮುಸ್ಲಿಂ ಮಹಿಳೆಯಾಗಿ ಅವರಿಗೆ ಅನ್ನಿಸಿದ ಭಾವನೆಗಳು ಅದಾಗಿತ್ತು. ಆ ಪದ್ಯಕ್ಕೆ ಸಿಕ್ಕ ಪ್ರೋತ್ಸಾಹ, ಪ್ರತಿಕ್ರಿಯೆ ಸ್ಪೂರ್ತಿದಾಯಕವಾಗಿತ್ತು. ಕವಿಗಳಾದ ಖಾಜಾ, ಅಕ್ಬರ್ ದಿಲಾವರ್ ಮತ್ತು ಸ್ಕೈ ಬಾಬಾ ಇನ್ನೂ ಹೆಚ್ಚು ಬರೆಯುವಂತೆ ಈಕೆಯನ್ನು ಪ್ರೋತ್ಸಾಹಿಸಿದ್ದರು. ಮುಸ್ಲಿಂ ಮಹಿಳೆಯರ ಸ್ಥಿತಿ-ಗತಿಯನ್ನು ಯಾರೂ ತೆಲುಗಿನಲ್ಲಿ ಬರೆಯುವುದಿಲ್ಲವಾದ್ದರಿಂದ ಶಹಜಹಾನ ಈ ಕೆಲಸ ಮಾಡಲೇಬೇಕೆಂದು ಅವರು ಪ್ರೋತ್ಸಾಹಿಸಿದ್ದರು. ಈ ಹಿನ್ನೆಲೆಯಲ್ಲಿ ಕೂಡಾ ಕವಯಿತ್ರಿಯಾಗಿ ಶಹಜಹಾನಳನ್ನು ಹೆಚ್ಚು ಗುರುತಿಸಲಾಯಿತು.

ಆದರೆ ಕೀರ್ತಿ, ಹೆಸರಿಗೋಸ್ಕರ ಮಾತ್ರ ಶಹಜಹಾನ್ ಬರೆಯಲಿಲ್ಲ. ಬರೆಯಬೇಕಾದ ವಿಚಾರಗಳ ಬಗ್ಗೆ ಈಕೆ ಬರೆಯದಿದ್ದರೆ ಕೆಲವು ವಿಚಾರಗಳು ಆಕೆಯೊಳಗೇ ಅಡಗಿಕೊಳ್ಳುತ್ತವೆ ಎನಿಸಿದಾಗ ಲೇಖಕಿ ಬರೆಯತೊಡಗಿದರು. ವಾದ, ವಿಚಾರಗಳು ಮರೆತು ಹೋಗುತ್ತವೆ. ಹಾಗೆಯೇ ವಿಚಾರ, ವಾದಗಳ ಹಿನ್ನಲೆಯಲ್ಲಿ ಇರುವ ಕಾವ್ಯ ಕೂಡಾ ನಶಿಸಿ ಹೋಗುತ್ತದೆ ಎನ್ನುತ್ತಾರೆ. ಆದರೆ ಲೇಖಕಿ ಇದನ್ನು ಒಪ್ಪುವುದಿಲ್ಲ. ಶಹಜಹಾನಳ ಪ್ರಕಾರ ಅಂತಹ ಕಾವ್ಯ ಕೂಡಾ ಉಳಿಯುತ್ತದೆ. ವಿಚಾರಗಳು, ಕಾವ್ಯ ನೋವಿನಿಂದ ಬರುತ್ತವೆ. ಗಾಯದಿಂದ, ಕಣ್ಣೀರಿನಿಂದ ಕಾವ್ಯ ಹುಟ್ಟುತ್ತದೆ. ಈ ರೀತಿಯ ಕಾವ್ಯ ಜನರ ಹೃದಯದಲ್ಲಿ ಉಳಿಯುತ್ತದೆ. ಆಕೆ ಬರಹಗಾರ್ತಿಯಾಗಿ ಮುಸ್ಲಿಂ ಮಹಿಳೆಯರ ಬಗ್ಗೆ ಮಾತ್ರ ಬರೆಯಲು ಇಷ್ಟಪಡುತ್ತಾರೆ. ಈಗಿನ ಹಂತದಲ್ಲಿ, ಸಮಯದಲ್ಲಿ ಶಹಜಹಾನರ ಉದ್ದೇಶ ಇದೇ ಆಗಿದೆ. ಭವಿಷ್ಯದಲ್ಲಿ ತಮ್ಮನ್ನು ಅಲುಗಾಡಿಸುವ ಇನ್ನೇನದರ ಬಗ್ಗೆಯೋ ತಾವು ಬರೆಯಬಹುದು ಎಂದು ಶಹಜಹಾನ ಹೇಳುತ್ತಾರೆ.

ಈಕೆ 'ಸಿಲ್‌ಸಿಲಾ' ಕಥೆ ಬರೆದುದು ಈಕೆಯ ಮನಸ್ಸು ಕಲಕಿದ ಘಟನೆಯಿಂದ. ಯಾವುದೇ ಕುಟುಂಬದಲ್ಲಿ ತಂದೆಯ ಕುಟುಂಬದವರಿಗೆ ಹೆಚ್ಚು ಪ್ರಾಮುಖ್ಯತೆ ಇರುತ್ತದೆ. ಆದರೆ ಈಕೆಗೆ ತಾಯಿಯ ಕುಟುಂಬದವರೊಂದಿಗೆ ನಿಕಟ ಸಂಪರ್ಕ ಇತ್ತು. ತಾಯಿಯ ತಾಯಿಯೊಂದಿಗೆ ಶಹಜಹಾನ್ ಆತ್ಮೀಯ ಸಂಬಂಧ ಹೊಂದಿದ್ದರು. ರಜಾ ದಿನಗಳಲ್ಲಿ ಈಕೆ ತಾಯಿಯ ಕುಟುಂಬವನ್ನು, ಕುಟುಂಬದ ಬಂಧುಗಳನ್ನು ಹೆಚ್ಚಾಗಿ ಭೇಟಿಯಾಗುತ್ತಿದ್ದರು. ಹಳ್ಳಿ ಕಂಡರೆ ಈಕೆಗೆ ಇಷ್ಟ. ಅಲ್ಲಿ ವ್ಯವಸಾಯದ ಕೆಲಸ ಮಾಡಿಸುವುದು. ಹಳ್ಳಿ ಸುತ್ತುವುದೋ ಶಹಜಹಾನಳಿಗೆ ಪ್ರೀತಿ. ಚಿಕ್ಕ ವಯಸ್ಸಿನಿಂದಲೂ ಈಕೆ ಒಬ್ಬಳೇ ಪ್ರಯಾಣಿಸುತ್ತಿದ್ದಳು. ಒಂದು ಸಂದರ್ಭದಲ್ಲಿ ಈಕೆ ದೊಡ್ಡಮ್ಮನನ್ನು ನೋಡಲು ಹೋಗಿದ್ದಳು. ಅವರ ಸ್ಥಿತಿ-ಗತಿ ನೋಡಿ ಲೇಖಕಿಗೆ ಹೆಚ್ಚು ನೋವಾಗಿತ್ತು. ಆ ಹಳ್ಳಿ, ಆಕೆಯ ದೊಡ್ಡಮ್ಮ ಅವರ ಸೊಸೆ ಈಕೆಯ ಮನಸ್ಸನ್ನು ಕದಲಿಸಿದ್ದರು. ಜವಾಬ್ದಾರಿಗಳಿಂದ ಆ ಸೊಸೆ ನಲುಗಿ ಹೋಗಿದ್ದಳು. ಶಹಜಹಾನ ಇದನ್ನು ಕಥೆ ಎಂದು ಬರೆಯದೇ ಒಂದು ಅನುಭವವಾಗಿ ಬರೆದರು. ಸ್ಕೈ ಬಾಬಾ ಇದನ್ನು ಓದಿ ಬಹಳ ವ್ಯಥೆ ಪಟ್ಟಿದ್ದರು. ಅದನ್ನೇ ಕಥೆ ಮಾಡಿ ಬರೆಯಲು ಹೇಳಿದರು. ಈ ಅನುಭವಗಳನ್ನೇ ಲೇಖಕಿ ಕಥೆಯಾಗಿ ಬರೆದರು. ಈಕೆ ರೇಡಿಯೋಗಾಗಿ ಅನೇಕ ಕಥೆಗಳನ್ನು ಬರೆದಿದ್ದಾಗ್ಯೂ ಕೂಡಾ 'ಸಿಲ್‌ಸಿಲಾ' ಈಕೆಗೆ ಸಣ್ಣ ಕಥೆಗಾರ್ತಿಯೆಂಬ ಹೆಸರು ತಂದಿತ್ತು. ಈ ಕಥೆಯಲ್ಲಿ ದುಡೇಕುಲ ಮಹಿಳೆಯರ ಕಷ್ಟಗಳು, ಮುಸ್ಲಿಂ ಹಾಗೂ ದುಡೇಕುಲ ಸಮುದಾಯದ ವ್ಯತ್ಯಾಸಗಳು ಪಿತೃ ಪ್ರಾಧಾನ್ಯತೆಯ ರೂಢಿಗಳು ಈ ಎಲ್ಲ ಅಂಶಗಳನ್ನು ಕಥೆಯಲ್ಲಿ ಹೇಳಲು ಶಹಜಹಾನ ಪ್ರಯತ್ನಿಸಿದ್ದರು.

ಬಾಬ್ರಿ ಮಸೀದಿಯನ್ನು ಕೆಡವಿದ ಘಟನೆಯ ಬಗ್ಗೆ ಲೇಖಕಿ ತೀವ್ರವಾಗಿ ಪ್ರತಿಕ್ರಯಿಸುತ್ತಾರೆ. ಈ ಘಟನೆ ನಡೆದಾಗ ಶಹಜಹಾನ ತೀವ್ರವಾಗಿ ನೊಂದುಕೊಂಡಿದ್ದರು. ಈಕೆಯೇನೂ ಧಾರ್ಮಿಕ ವ್ಯಕ್ತಿಯಲ್ಲ, ಅಥವಾ ಮುಸ್ಲಿಂ ಅಸ್ತಿತ್ವದ ಬಗ್ಗೆ ಈಕೆ ಪ್ರಜ್ಞಾವಂತಳಾಗಿ ಕೂಡಾ ಇಲ್ಲ. ಅದಾಗ್ಯೂ ಈಕೆಗೆ ನೋವಾಗಿತ್ತು. ಹಾಗಿದ್ದರೆ ಇಸ್ಲಾಂ ನಲ್ಲಿ ಗಾಢ ನಂಬಿಕೆ ಇರುವ ಜನರಿಗೆ ಎಷ್ಟು ನೋವಾಗಿರಬೇಕೆಂದು ಈಕೆಗೆ ಅನಿಸಿತ್ತು. ಆ ಸಮಯದಲ್ಲಿ ಶಹಜಹಾನಳಿಗೆ 17 ವರುಷ. ಈಕೆಯ ಅಸ್ತಿತ್ವಕ್ಕೇ ಧಕ್ಕೆ ಬಂದ

ಹಾಗೆ ಈಕೆಯ ಮನಸ್ಸಿಗೆ ಅನ್ನಿಸಿತ್ತು. ಈಕೆ ಮುಸ್ಲಿಂ ಎನ್ನುವುದನ್ನು ಅದು ಜ್ಞಾಪಕ ಮಾಡಿಕೊಟ್ಟಿತ್ತು. ಯಾವುದೋ ಘರ್ಷಣೆಯಲ್ಲಿ ಸಿಕ್ಕಿಕೊಂಡ ಹಾಗೆ ಅನ್ನಿಸಿ ಈಕೆಗೆ ಭಾವನೆ ಕಾಡಿತ್ತು. ಅಲ್ಲಿಯವರಿಗೆ ಆಕೆಯ ಗೆಳತಿಯರೆಲ್ಲ ಹಿಂದೂಗಳಾಗಿದ್ದರು. ಆಕೆಯ ಬಾಲ್ಯದಲ್ಲಿ ಹಿಂದು-ಮುಸ್ಲಿಂರು ಗೆಳೆಯರಾಗಿರುವ ಹಲವಾರು ಸಿನೆಮಾಗಳನ್ನು ಆಕೆ ನೋಡಿದ್ದಳು. ಆಗೆಲ್ಲ ಲೇಖಕಿಗೆ ಒಳ್ಳೆಯದೆನಿಸುತ್ತಿತ್ತು. ಆಕೆ ಚಿಕ್ಕವಳಿರುವಾಗ ದೇವಸ್ಥಾನಕ್ಕೆ ಹೋಗುತ್ತಿದ್ದಳು. 4ನೆಯ ತರಗತಿಯಲ್ಲಿ ಇರುವಾಗ ವಲ್ಲಭಿ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಮೈಕ್‌ನ ಮುಂದೆ ಘಂಟೆಗಟ್ಟಲೆ ರಾಮಭಜನೆ ಭಜಿಸುತ್ತಾ ಕೂರುವಾಗ ರಾಮ ನಾಯಕನಾಗಿ ಕಂಡಿದ್ದ. ಈಗ ಅವನು ಖಳನಾಯಕನಾಗಿ. ಬಾಬ್ರಿ ಮಸೀದಿಯ ಪತನದ ನಂತರವೇ ಲೇಖಕಿ ಗಂಭೀರವಾಗಿ ಮುಸ್ಲಿಂ ಸಂಸ್ಕೃತಿಯ ಬಗ್ಗೆ ಯೋಚಿಸಲು ಪ್ರಾರಂಭಿಸಿದ್ದು. ಬಾಲ್ಯದಲ್ಲಿ ಆಕೆ ಅದನ್ನು ಕಳೆದುಕೊಂಡಿದ್ದರು. ಆಕೆಯ ಮದುವೆಯ ನಂತರ ಆಕೆ ಮುಸ್ಲಿಂ ಪರಿಸರವನ್ನು ಮತ್ತೆ ಪ್ರವೇಶಿಸಿದ್ದರು.

ಶಹಜಹಾನ ಪ್ರೀತಿಸಿ ಮದುವೆಯಾದವರು. ಬಾಲ್ಯದಿಂದಲೂ ಮದುವೆ ಎಂದರೆ ಆಕೆಗೆ ಭಯ ಹಾಗೂ ಹೆದರಿಕೆ. ಮೊದಲ ಭಯವೆಂದರೆ ಆಕೆ ಬುರ್ಖಾ ಹಾಕಬೇಕಾಗುತ್ತದೆ ಎಂಬುದು. ಬುರ್ಖಾ ಹಾಕುವಂತೆ ಒತ್ತಾಯಿಸುವ ಯಾರನ್ನು ತಾನು ಮದುವೆಯಾಗುವುದಿಲ್ಲವೆಂದು ಆಕೆ ಯಾವಾಗಲೂ ಹೇಳುತ್ತಿದ್ದಳು.

ಎರಡನೆಯ ಭಯ ಸಾಹಿತ್ಯವನ್ನು ತಾನು ಬಿಟ್ಟು ಬಿಡಬೇಕಾದೀತು ಎನ್ನುವುದು. ಸಾಹಿತ್ಯ ಗೊತ್ತಿಲ್ಲದ ಮನುಷ್ಯನನ್ನು ಮದುವೆಯಾದರೆ ಆತನಿಗೆ ತಾನು ಅರ್ಥವಾಗುವುದು ಕಷ್ಟ ಎಂದು ಲೇಖಕಿಗೆ ಅನ್ನಿಸಿತ್ತು. ತೆಲುಗು ಸಾಹಿತ್ಯದ ಹಿನ್ನೆಲೆ ಇರುವ ಮುಸ್ಲಿಂ ಸಮುದಾಯಗಳು ಕಡಿಮೆ. ಶಹಜಹಾನಳಿಗೆ ಸಾಹಿತ್ಯವೇ ಉಸಿರಾಗಿತ್ತು. ಒಬ್ಬ ಹಿಂದೂವನ್ನು ಮದುವೆಯಾಗುವುದೆಂದು ಆಕೆ ಮೊದಲು ನಿರ್ಧರಿಸಿದ್ದಳು. ಆದರೆ ಅದು ಕಷ್ಟ ಸಾಧ್ಯವಾಗಿತ್ತು. ಹಿಂದೂ ಒಬ್ಬನನ್ನು ಪ್ರೀತಿಸಿದ್ದಕ್ಕಾಗಿ ಅವರ ಕುಟುಂಬದಲ್ಲಿಯೇ ಒಬ್ಬಳನ್ನು ವಿಷ ಹಾಕಿ ಸಾಯಿಸಲಾಗಿತ್ತು. ಲೇಖಕಿ ಬಿಂದಿ ಧರಿಸಿದಾಗ ಆಕೆಯ ತಂದೆ ಏನನ್ನೂ ಹೇಳಿರಲಿಲ್ಲ. ಆದರೆ ಆಕೆಯ ಚಿಕ್ಕಪ್ಪ ಬಯ್ಯುತ್ತಿದ್ದರು. ಬಾಬರಿ ಮಸೀದಿಯ ಘಟನೆಯ ನಂತರ ಪರಿಸ್ಥಿತಿ ಇನ್ನೂ ಸಂಕೀರ್ಣವಾಗತೊಡಗಿತ್ತು. ಹಿಂದೂವನ್ನು ಮದುವೆಯಾಗುವುದು ಸಾಧ್ಯವಿಲ್ಲ ಎಂದು ಆಕೆಗೆ ಅನ್ನಿಸತೊಡಗಿತ್ತು. ಆಕೆ ಯಾವ ಹಿಂದೂ ಹುಡುಗನನ್ನು ಪ್ರೀತಿಸಿರಲಿಲ್ಲ. ಆದರೆ ಸಾಹಿತ್ಯದ ವಾತಾವರಣಕ್ಕಾಗಿ ಈ ಆಸೆಯನ್ನು ಹೊಂದಿದ್ದರು. ಯಾರಾದರೂ ಹಿಂದೂ ಹುಡುಗನನ್ನು ತಾನು ಪ್ರೀತಿಸಿದ್ದರೆ ಅವರನ್ನು ಮದುವೆಯಾಗುತ್ತಿದ್ದೆ ಎಂದು ಲೇಖಕಿ ಸೂಚಿಸುತ್ತಾರೆ.

ಬಾಲ್ಯದಿಂದಲೂ ತಾನು ವ್ಯಕ್ತಿವಾದಿಯಾಗಿದ್ದೆ ಎಂದು ಲೇಖಕಿ ನುಡಿಯುತ್ತಾರೆ. ಒಂದು ಸಲ ಆಕೆಯ ತಂದೆ-ತಾಯಿಗಳ ಜೊತೆಗಿನ ಭಿನ್ನಾಭಿಪ್ರಾಯಗಳಿಂದಾಗಿ ಆಕೆ ಒಂಟಿಯಾಗಿ, ಪ್ರತ್ಯೇಕವಾಗಿ ಅಡಿಗೆ ಮಾಡಿಕೊಂಡು ಇರಲು ಪ್ರಾರಂಭಿಸಿದ್ದರು. ಏಕೆಂದರೆ ಆಕೆ M.A ಮಾಡುವುದಕ್ಕೆ ಅವರು ಬಿಟ್ಟಿರಲಿಲ್ಲ. ಶಹಜಹಾನ ಭದ್ರಾಚಲಂಗೆ ಹೋಗಿ ಕೆಲಸ ಮಾಡಿ ಬದುಕತೊಡಗಿದ್ದರು, ಸ್ಕೈ ಬಾಬಾ ಇದೇ ಸಂದರ್ಭದಲ್ಲಿ ಈಕೆಯ ಪದ್ಯ 'ಲಿಫ್ಟ್ ದಿ ವೇಲ್ ಆ್ಯಂಡ್ ಲುಕ್' ಓದಿ ಈಕೆಗೊಂದು ಪತ್ರ ಬರೆದರು. ಅಷ್ಟರೊಳಗೆ ಆಕೆ ಆತನ ಪದ್ಯಗಳೆಲ್ಲವನ್ನೂ ಓದಿದ್ದರು. ಈ ಪತ್ರ ಬರುವ ಸಮಯಕ್ಕೆ ಇವರ ಮನೆಯವರು ಇವರಿಗೊಂದು ಗಂಡು ನೋಡಿದ್ದರು. ಸ್ಕೈ ಬಾಬಾ ಅವರ ಪತ್ರದಿಂದ ಸ್ಫೂರ್ತಿ ಪಡೆದಿದ್ದ ಈಕೆ ಆ ಗಂಡನ್ನು ನಿರಾಕರಿಸಿದರು. ಆ ಗಂಡನ್ನು ಮದುವೆಯಾಗುವುದಕ್ಕಿಂತ ಸಾಯುವುದು ಉತ್ತಮ ಎಂದು ಆಕೆ ಪ್ರತಿಭಟಿಸಿದ್ದರು. ತಂದೆಯ ನೆರವು, ಬೆಂಬಲದಿಂದ ಆಕೆ ಬಂಧು ಭಾಂದವರ ಒತ್ತಡಗಳನ್ನು ಮೀರುವಂತಾಯಿತು. ಸ್ಕೈ ಬಾಬಾ ಹಾಗೂ ಶಹಜಹಾನ ಒಂದು ವರುಷ ಪತ್ರ ವ್ಯವಹಾರ ಮುಂದುವರಿಸಿದರು. ನಂತರ ಹೈದರಾಬಾದ್‌ನಲ್ಲಿ ಗೆಳೆಯರೊಬ್ಬರ ಮನೆಯಲ್ಲಿ ಭೇಟಿಯಾದರು. ಆಗಷ್ಟೇ ಅವರಿಬ್ಬರೂ ವೋಲ್ಗಾರವರ 'ಪ್ರಯೋಗಂ' ಓದಿದ್ದರು. ಸ್ಕೈ ಬಾಬಾ 'ಪ್ರಯೋಗಂ' ತರಹ ಮದುವೆಯಿಲ್ಲದೇ ಒಟ್ಟಿಗೇ ಬದುಕೋಣ ಎಂದು ಸಲಹೆ ಇತ್ತಿದ್ದರು. ಆ ವಿಚಾರ ಲೇಖಕಿಗೂ ಇಷ್ಟವಾಗಿತ್ತು. ಸ್ಕೈ ಬಾಬಾ ಶಹಜಹಾನಳ ತಂದೆಯವರಲ್ಲಿ ಈ ವಿಚಾರ ಹೇಳಿದರು. ಆದರೆ ಅವರು ಇದಕ್ಕೆ ಒಪ್ಪಲಿಲ್ಲ. ಮುಸ್ಲಿಂ ಮದುವೆಯ ತರಹ ಧಾಂ,....ಧೂಂ ಮದುವೆಗೆ ಶಹಜಹಾನ ಹಾಗೂ ಸ್ಕೈ ಬಾಬಾ ಇಬ್ಬರೂ ವಿರೋಧ ವ್ಯಕ್ತಪಡಿಸಿದ್ದರು. ಸ್ಕೈ ಬಾಬಾ ಕೂಡಾ ನಮಾಜ್ ಮಾಡುವುದಿಲ್ಲ. ಇವರಿಬ್ಬರ ಬದುಕಿನಲ್ಲಿ ಯಾವುದೇ ಧರ್ಮಕ್ಕೆ ಸ್ಥಾನವಿರಲಿಲ್ಲ. ಆದರೆ ಕುಟುಂಬದವರು ಇದಕ್ಕೆಲ್ಲ ಒಪ್ಪಲಿಲ್ಲ. ಶಹಜಹಾನಳ ಕುಟುಂಬದವರು ರೆಜಿಸ್ಟರ್ಡ್ ಮದುವೆಗೆ ಒಪ್ಪಿದ್ದರು. ಆದರೆ ಸ್ಕೈ ಬಾಬಾ ಕುಟುಂಬದವರು ಒಪ್ಪಲಿಲ್ಲ ಆತನ ಕುಟುಂಬದವರು ಯಾವುದೇ ಹೆಚ್ಚು ಮಾತು - ಕತೆ ಇಲ್ಲದೇ ಕ್ವಾಜಿ ಮುಂದೆ ಸಹಿ ಮಾಡಿ ಸಾಕು ಎಂದಿದ್ದರು - ಹಾಗಾಗಿ ಅವರಿಗೆ ತೃಪ್ತಿಯಾಗುವಂತೆ ನಡೆದುಕೊಳ್ಳಬೇಕಾಯಿತು. ನಂತರ ಇವರ ಮದುವೆ ರಿಜಿಸ್ಟರ್ಡ್ ಆಯಿತು. ಇವರಿಬ್ಬರು ವಿವಾಹವನ್ನು ಧರ್ಮದ ಪ್ರಭಾವದಿಂದ

ದೂರ ಇಡಲು ಬಯಸಿದ್ದರು. ಆದರೆ ಹಾಗಾಗಲಿಲ್ಲ. ಇಬ್ಬರೂ ಸಾಹಿತ್ಯದ ಪ್ರೇಮಿಗಳಾಗಿದ್ದರಿಂದ ತಮ್ಮಿಬ್ಬರದೂ ಸಮಾನ ಸಂಬಂಧ ಎಂದು ಶಹಜಹಾನ ಹೇಳುತ್ತಾರೆ. ಇವರಿಬ್ಬರೂ ಮನೆಗೆಲಸವನ್ನು ಹಂಚಿಕೊಳ್ಳುತ್ತಾರೆ.

ಇವರೀರ್ವರಲ್ಲೂ ಸಮಾನ ಸಂಬಂಧವಿದ್ದರೂ ಕುಟುಂಬಗಳಲ್ಲಿ ಹಾಗಿಲ್ಲ. ಮುಸ್ಲಿಂಗಳಲ್ಲಿ ಕೂಡಾ ಜಾತಿ ಪದ್ಧತಿ ಇದೆ. ಈಕೆ ದುಡೇ ಕುಲದವರು. ಸೈ ಬಾಬಾ ಮೇಲು ಸ್ತರದ ಜಾತಿಯಿಂದ ಬಂದವರು. ಇದು ಈಕೆಗೆ ಸಮಸ್ಯೆಯನ್ನು ಉಂಟುಮಾಡಿತ್ತು. ಒಂದು ಸಲ ಒಂದು ಸೆರಮನಿಗೆ ಹೋಗುವಂತೆ ಇವರಿಗೆ ಒತ್ತಾಯಿಸಲಾಯಿತು. ಆಕೆಗೆ ಒಂಟಿ ಎನಿಸತೊಡಗಿತ್ತು. ಅವರ ಪ್ರಕಾರ ಈಕೆಯದು ಕೀಳು ಜಾತಿ. ಅವರ ಆಚಾರ - ವಿಚಾರಗಳು ಹೆಚ್ಚುಗಾರಿಕೆಯವು ಎನ್ನುವ ಭಾವನೆ. ಇದರಿಂದಾಗಿ ಅವರ ಮನಸ್ಸಿನಲ್ಲಿ ಉಂಟಾದ ಹೊಯ್ದಾಟಗಳನ್ನು ಲಿಡಾಫ್ ಪದ್ಯದಲ್ಲಿ ವ್ಯಕ್ತಪಡಿಸಿದ್ದರು.

ಲೇಖಕಿಗೆ ಪ್ರಿಯವಾದ ಲೇಖಕರೆಂದರೆ ಚಲಂ. ಇವರ ಅಮೀನಾ ಮತ್ತು ಮೇಡಾನಮ್ ಈಕೆಗೆ ಇಷ್ಟ. ಗೋರ್ಕಿಯವರ 'ಮದರ್', ಚಾವ್ ಛೇಂಗ್‌ರವರ "ಮೈ ಫ್ಯಾಮಲಿ" ಇವರ ಇಷ್ಟವಾದ ಕೃತಿಗಳು. ಆಧುನಿಕ ಬರಹಗಾರರಾದ ವೋಲ್ಗಾ, ಹಾಗೂ ವಿಮಲ ಇಷ್ಟವಾದ ಲೇಖಕರು. ರಂಗನಾಯಕಮ್ಮನವರ ಬರಹಗಳನ್ನು ಶಹಜಹಾನವರು ಓದಿಲ್ಲ.

ಈಕೆ ತೆಲುಗಿನಲ್ಲಿ ಬರೆಯುವುದರಿಂದ ಹೆಚ್ಚು ಮುಸ್ಲಿಂರು ಈಕೆಯ ಬರಹಗಳನ್ನು ಓದಲಾಗಿಲ್ಲ. ಈಕೆಯ ಪದ್ಯಗಳು ಉರ್ದುಗೆ ಅನುವಾದವಾದರೆ ಈಕೆಗೆ ಅಪಾಯ ಇದೆ ಎಂದು ಹೇಳಲಾಗುತ್ತದೆ.

ಒಂದು ಬಾರಿ ಈಕೆ ಮುಸ್ಲಿಂರ ಗುಂಪು ಸಭೆಯೊಂದಕ್ಕೆ ಹೋಗಿದ್ದರು. ಆ ಗುಂಪಿಗೆ ಸೇರಲು ಇವರು ಇಷ್ಟಪಟ್ಟರು. 'ಈವರೆಗೆ ನೀನೇನು ಬರೆದಿದ್ದೀಯೋ ಅದನ್ನು ಬಿಟ್ಟು ಬಿಡುತ್ತೇವೆ. ಆದರೆ ಭವಿಷ್ಯದಲ್ಲಿ ಸರಿಯಾಗಿ ಬರೆದರೆ ಮಾತ್ರ ನಾವು ನಿನಗೆ ಸಹಾಯಿಸುತ್ತೇವೆ' ಎಂದು ಅವರು ನುಡಿದರು. ಆದರೆ ಶಹಜಹಾನ ತಮಗೆ ಯಾವುದೇ ಸಹಾಯವೂ ಅಗತ್ಯವಿಲ್ಲ ಎಂದರು. ತಮ್ಮನ್ನು ತಾವೇ ನೋಡಿಕೊಳ್ಳಬಲ್ಲರು, ಬದುಕಬಲ್ಲರು ಎಂದೂ ನುಡಿದರು.

ಈಕೆ ಕೆಲವು ಸ್ಥಳಗಳಿಗೆ ಹೋದರೆ ಅಪಾಯವಿದೆ ಎಂದು ಹೇಳಲಾಗುತ್ತದೆ. ಆದರೂ ಶಹಜಹಾನ ಹೇಳುತ್ತಾರೆ ಪದ್ಯ ಬರೆಯುವಾಗ ಅಪಾಯದ ಬಗ್ಗೆ, ಯೋಚಿಸಿ ಯಾರೂ ಬರೆಯುವುದಿಲ್ಲ. ಪದ್ಯ ಬರೆಯುವುದರಿಂದ ಅಪಾಯ ಎದುರಿಸಬೇಕಾದರೆ - ಅದರೊಂದಿಗೇ ಬದುಕಬೇಕಾಗುತ್ತದೆ ಎಂದು ಲೇಖಕಿ ನುಡಿಯುತ್ತಾಳೆ.

**ಸಂದರ್ಶನ**
**ವೋಲ್ಗಾ**

(From
Just Between us.
Edited by - Ammu Joseph,
Vasantha Kannabiram, Ritu Menon,
Gouri Salvi, Volga)

## ಹೀಗೇಕೆ ?

**- ತಸ್ಲೀಮ್**

ಇಮ್ರಾನ.... ಎಲ್ಲ ಪತ್ರಿಕೆಗಳಲ್ಲಿ, ಟಿ.ವಿ ಛಾನಲ್‌ಗಳಲ್ಲಿ, ಮತ್ತು ಪ್ರತಿಯೊಂದು ಮನೆಯಲ್ಲಿ ಇಮ್ರಾನಳ ಬಗ್ಗೆ ಚರ್ಚೆ. ಈಕೆ ಒಬ್ಬ ಹೆಣ್ಣು ಮಗಳಲ್ಲ, ಒಂದು seasonal fever ಎನಿಸಿಬಿಟ್ಟಿದಾಳೆ. ಮುಸ್ಲಿಂ ಮಹಿಳೆ ಅತ್ಯಾಚಾರಕ್ಕೆ ತುತ್ತಾದ ವಿಷಯ ರಾಷ್ಟ್ರೀಯ ಚರ್ಚೆಗೆ ವಸ್ತುವಾಗಿದೆ. ಒಂದು ಬಾರಿ ಶಾಬಾನು, ಮತ್ತೊಮ್ಮೆ ಗುಡಿಯಾ, ಮತ್ತೊಮ್ಮೆ ಜಾಹಿರಾ, ಹೀಗೇಕೆ ? ಇದರ ಹಿನ್ನಲೆಯೇನು ? ಎಂಬ ಹಲವಾರು ಪ್ರಶ್ನೆಗಳು ಮನದ ಮೂಲೆಯಲ್ಲಿ ಹುಟ್ಟುತ್ತವೆ. ಹೀಗೆಯೇ ಅತ್ಯಾಚಾರ ಎಲ್ಲಾ ಜಾತಿ, ವರ್ಗದ, ಧರ್ಮದ ಮಹಿಳೆಯರ ಮೇಲೂ ಪ್ರತಿನಿತ್ಯ ನಡೆಯುತ್ತದೆ. ಆದರೆ ಅವುಗಳೇಕೆ ರಾಷ್ಟ್ರೀಯ ಮಟ್ಟದ ಚರ್ಚೆಗಳಾಗುವುದಿಲ್ಲ ? ತಂದೆಯಿಂದಲೇ ಅತ್ಯಾಚಾರಕ್ಕೊಳ - ಗಾದ ಮಗಳು, ತನ್ನ ಗಂಡನನ್ನು ಬಿಡುಗಡೆ ಮಾಡಿಸಿ ತಂದ ಆಕೆಯ ಅಮ್ಮ.... ಹೀಗೆ ಅಮಾನುಷವಾಗಿರುವಂತಹ ದೌರ್ಜನ್ಯಗಳು ಚಿಕ್ಕ ಹುಡುಗಿಯರಿಂದ ಹಿಡಿದು ದೊಡ್ಡವರ ಮೇಲೂ ನಡೆಯುತ್ತಲೇ ಇರುತ್ತವೆ. ಆದರೆ ಇವೆಲ್ಲ ಯಾಕೆ ಚರ್ಚೆ ಆಗುವುದಿಲ್ಲ ?

ಇಂತಹ ಘಟನೆಗಳು ನಡೆದಾಗ ಚರ್ಚೆಯ ದಿಕ್ಕು ಯಾವ ಕಡೆಗಿರಬೇಕು ? ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ನಡೆದಾಗ ವಾಸ್ತವಾಂಶದಿಂದ ವಿಷಯಗಳು ಬೇರೆ ಕಡೆ ಹೊರಳುತ್ತದೆ. ನನ್ನ ತೀವ್ರವಾದ ಆಲೋಚನೆಯೆಂದರೆ ತಪ್ಪು ಯಾರು ಮಾಡಿರುತ್ತಾರೋ ಅವರ ಕಡೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಅವನಿಗೆ ಯಾವ ರೀತಿಯ ಶಿಕ್ಷೆ ನೀಡಬೇಕು. ಎಂಬುದರ ಬಗ್ಗೆ ಮೊದಲು ಚರ್ಚೆ ನಡೆಯಬೇಕು. ಆದರೆ, ಹೀಗಾಗುತ್ತಿಲ್ಲ. ಇಮ್ರಾನಳ ಮೇಲೆ ಹೆಚ್ಚು ಒತ್ತಡ ಹಾಕಲಾಗುತ್ತಿದೆ. ಅವನಿಗೆ ನೀಡುವ ಶಿಕ್ಷೆ ಇವಳಿಗೆ ನ್ಯಾಯವಲ್ಲವೆ? ಅವನಿಗೆ ಮೊದಲು ಶರಿಯತ್ ಪ್ರಕಾರ ಶಿಕ್ಷೆಯಾಗಲಿ. ಅದು ಮೊದಲು ನಿರ್ಧಾರವಾಗ ಬೇಕು. ನಂತರ ಇಮ್ರಾನಾಳ ಕಡೆ ಗಮನ ಹರಿಸುವುದ ನ್ಯಾಯವಲ್ಲವೆ ?

ಈ ಸಂದರ್ಭದಲ್ಲಿ ನಾಲ್ಕು ನೂರು ವರ್ಷದ ಹಿಂದಿನ ಒಂದು ಸಂಗತಿಯನ್ನು ಉದಾಹರಿಸಬಹುದು. ಪ್ರವಾದಿ ಹಜರತ್ ಮಾಹಮ್ಮದ್ ರವರ ಬಳಿ ಒಬ್ಬ ಗರ್ಭಿಣಿ ಮಹಿಳೆ ಬಂದು ನಾನು ಆತ್ಮ ಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಾಳೆ. ಅನೈತಿಕ ಸಂಬಂಧದಿಂದ ಆಕೆ ಗರ್ಭಿಣಿ ಯಾದುದರಿಂದ ಆಕೆ ಹಾಗೆ ಹೇಳುತ್ತಾಳೆ. ಆಗ ಪ್ರವಾದಿ ನೀನು ಈಗ ಗರ್ಭಿಣಿ ಮಗು ಹುಟ್ಟಿದ ನಂತರ ಈ ವಿಚಾರವನ್ನು ಚರ್ಚಿಸೋಣ ಎಂದು ಹೇಳುತ್ತಾರೆ. ಮಗು ಹುಟ್ಟಿದ ನಂತರ ಆಕೆ ಪುನಃ ಪ್ರವಾದಿಯ ಬಳಿ ಬಂದು ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎನ್ನುತ್ತಾಳೆ. ಆಗ ಪ್ರವಾದಿಯು "ಮಗುವನ್ನು ಹಾಲು ಕುಡಿಸಿ ಬೆಳಸಿ, ಆ ಕಂದ ತನ್ನ ಊಟವನ್ನು ತಾನೇ ಮಾಡುವ ಹಂತಕ್ಕೆ ಬಂದಾಗ ಬಾ" ಎನ್ನುತ್ತಾರೆ. ಆಕೆ ಪುನಃ ಬಂದು ತನ್ನಿಂದ ತಪ್ಪು ಆಯಿತೆಂದು ಕಣ್ಣೀರು ಸುರಿಸುತ್ತಾಳೆ. ಪ್ರವಾದಿಯವರು ಮಾನವ ಜನತೆಯನ್ನು ಉದ್ದೇಶಿಸಿ "ಇವಳ ಕಣ್ಣೀರು ನಿಮ್ಮೆಲ್ಲರ ತಪ್ಪನ್ನು ತೊಳೆದು ಹಾಕುತ್ತದೆ : ಅವಳ ಪಶ್ಚಾತಾಪ ಎಲ್ಲರ ತಪ್ಪನ್ನು ತೊಳೆದು ಹಾಕುತ್ತದೆ. ಪರಮಾತ್ಮ ಅವಳನ್ನು ಕ್ಷಮಿಸುತ್ತಾನೆ." ಎಂದರು. ಒಬ್ಬ ಹೆಣ್ಣು ಅವಳು ಮಾಡಿದ ತಪ್ಪನ್ನು ಒಪ್ಪಿಕೊಂಡು ಬಂದಾಗ ಅವಳಿಗೆ ಪ್ರವಾದಿಗಳು ನೀಡಿದ ತೀರ್ಪು ಮಾನವೀಯತೆಯಿಂದ ಕೂಡಿದೆ. ಇಮ್ರಾನ ಯಾವುದೇ ತಪ್ಪನ್ನು ಮಾಡದೇ ಇರುವ ಸಂದರ್ಭದಲ್ಲಿ ಹೊರಡಿಸಲಾಗಿದೆಯೆನ್ನಲಾದ ಫತ್ವಾದ ಪ್ರಕಾರ ಇಮ್ರಾನಾಳಿಗೆ ಶಿಕ್ಷೆಯನ್ನು ನೀಡಿದಂತೆ ಆಗುವುದಿಲ್ಲವೆ ? ಈ ಪ್ರಕಾರ ಗಂಡನ ಜೊತೆಗಿನ ನಿಖಾ ರದ್ದಾಗಿ ಹೋದಲ್ಲಿ ಅವಳ ಜೀವನದ ಗತಿ ಏನು ? ಆಕೆಗೆ ಆಶ್ರಯ ನೀಡುವವರು ಯಾರು? ಆಕೆಗೆ ಸಿಗುವ ಆರ್ಥಿಕ ಭದ್ರತೆ ಏನು ? ಯಾರು ನೀಡುತ್ತಾರೆ ? ಅವಳ ಬದುಕಿಗೆ ಆಸರೆ ನೀಡುವವರು ಯಾರು ।

ಸಮಾಜದಲ್ಲಿ ತುಂಬಿತುಳುಕುವ ಯೌವ್ವನದಲ್ಲಿರುವ ಹೆಣ್ಣು ಮಕ್ಕಳಿಗೆ ಮದುವೆಯಾಗುವುದೇ ಒಂದು ಸಮಸ್ಯೆಯಾಗಿದೆ. ಬಡ ಗಂಡು ಮಕ್ಕಳಿಗೆ ಅದ್ದೂರಿಯಾಗಿ ಮದುವೆಯಾಗುವ ಇಚ್ಛೆ. ವರದಕ್ಷಿಣೆಯ ಆಸೆ . 2 ಲಕ್ಷ ಖರ್ಚು ಮಾಡಿ ಕಲ್ಯಾಣ ಮಂಟಪದಲ್ಲಿ ಮದುವೆಯಾಗುವ ಕನಸು. ಈ ಕನಸು - ನನಸು ಮಾಡುವ ದೆಸೆಯೆಲ್ಲಿಯೇ ಹೆಣ್ಣಿನ ಜೀವನ ಮುದುಡಿ ಹೋಗುತ್ತದೆ. ಇಂತಹ ಕಲ್ಯಾಣ ಮಂಟಪಗಳ ಉದ್ಘಾಟನೆಯನ್ನು ನಮ್ಮ ಕಾನೂನನ್ನು ರಕ್ಷಿಸುವ ಮಹಾಶಯರೇ ಮಾಡುತ್ತಾರೆ. ಇಸ್ಲಾಂನಂತಹ ಪವಿತ್ರವಾದ ಧರ್ಮದಲ್ಲಿ ಇಂತಹ ಒಂದು ಅದ್ದೂರಿಯಾದ ಮದುವೆಗೆ ಆಸ್ಪದ ಉಂಟೆ ? ಇಮ್ರಾನ ಬೇರೆ ಮದುವೆ ಆಗಲು ಅವಳ ಅಭಿಪ್ರಾಯ ಏನು ? ಅವಳನ್ನು ಯಾರು ಮುಂದೆ ಬಂದು ಮದುವೆಯಾಗುತ್ತಾರೆ ? ಇದರ ಜವಾಬ್ದಾರಿ ಯಾರು ವಹಿಸುತ್ತಾರೆ ? ಈ ಒಂದು ಕೆಲಸ ಎಷ್ಟು ಅವಧಿಯಲ್ಲಿ ಆಗಬಹುದು ? ಇದು ಇಮ್ರಾನಳ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರುತ್ತದೆ ? ಯಾವ ನಿರ್ಧಾರ ಸರಿ ? ಇದೆಲ್ಲವನ್ನು ಸ್ವತಂತ್ರ್ಯವಾಗಿ ಪರಿಶೀಲನೆ ಮಾಡುವ ಸ್ವಾತಂತ್ರ್ಯ ನಮಗೆ ಇದೆಯೇ ? ಸಾಧ್ಯವೇ ? ಇಂತಹ ನೂರಾರು ಪ್ರಶ್ನೆಗಳು ಮನದಲ್ಲಿ ಹುಟ್ಟಿ ಮಣ್ಣು ಪಾಲಾಗುತ್ತವೆ.

ಈಗಿನ ಸುದ್ದಿಯ ಪ್ರಕಾರ ಇಮ್ರಾನಳ ಅತ್ಯಾಚಾರ ಆಗಲೇ ಇಲ್ಲ. ಅವರ ಮನೆ ಚೌಕಟ್ಟು ಪುಟ್ಟದು. ಎಷ್ಟು ಪುಟ್ಟದು ಅಂದರೆ ಈ ಒಂದು ಅತ್ಯಾಚಾರಕ್ಕೆ ಅಸ್ಪದವೇ ಇಲ್ಲ. ಅವಳ ಮಾವ ತುಂಬ ಮರ್ಯಾದಸ್ಥ. ಅದರಲ್ಲೂ ಎರೆಡು ಹೆಂಡತಿಯನ್ನು ಪಡೆದ 'ಒಡೆಯ'. ಈ ವಿಪರ್ಯಾಸಗಳನ್ನು ನಾವು ಗಮನಿಸಬೇಕಾಗಿದೆ. ಇಮ್ರಾನಳಿಗಾಗಿ ಅಷ್ಟೊಂದು ಶೀಘ್ರುವಾಗಿ 'ಫತ್ವ' ಹೊರಡಿಸುವ ಅವಶ್ಯಕತೆ ಇತ್ತೇ ? ಇವಳೊಬ್ಬಳೇ ಇಮ್ರಾನ ಅಲ್ಲ. ಹಲವಾರು 'ರಾಣಿಗಳು', ಹಲವಾರು ಫರ್‌ಹಾನಗಳು ಉಂಟು. ಇಂತಹವರು ಸಾವಿರಾರು - ಇಂತಹ ಸಮಸ್ಯೆಗೆ ನಮ್ಮ ಉತ್ತರ ಏನಾಗಬೇಕು ?

ಕೊನೆಯದಾಗಿ ನಾನು ವಿಶೇಷವಾಗಿ ವ್ಯಕ್ತ ಪಡಿಸುವುದೇನೆಂದರೆ ಇಸ್ಲಾಂ ಧರ್ಮದಲ್ಲಿ ಒತ್ತಾಯವಾಗಿ, ಜಬರ್‌ದಸ್ತಿನಿಂದ ಕೆಲಸ ಮಾಡಿಸುವುದು ಯಾರ ಹಕ್ಕೂ ಅಲ್ಲ. ಬದುಕುವ ಹಕ್ಕಿನ ಸ್ವತಂತ್ರ್ಯ ಎಲ್ಲರಿಗೂ ಉಂಟು.

********

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 100 ರೂ**

**ಸಂಸ್ಥೆಗಳಿಗೆ : 150 ರೂ**

**ಸಂ.ಮಂಡಳಿ**

REGD No. : CPMG/KA/BGE/289/2003 - 05

BOOK-POST
PRINTED MATTER

ವಿಳಾಸ :

**ಮಾನಸ**

ಪಂಚಾಯಿತಿ ರಸ್ತೆ, ಕಾಡುಗೋಡಿ

ಬೆಂಗಳೂರು - 560 067